

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

SIHI KAHI

KANNADA DAILY MORNING

BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

RNI REG No. : KARKAN/2016/75068

Volume : 07 | Issue : 76 | Wednesday 27-11-2024 | E-mail : maruti.b.hosamani76@gmail.com | Page: 4 | Price : Rs. 1/-


## 75ನೇ ವರ್ಷದ ಸಂವಿಧಾನ ಸಮರ್ಪಣಾ-ದಿನಾಚರಣೆ ಆಚರಣೆ

**ಸಿಹಿ ಕಹಿ ಸುದ್ದಿ**



**ಮಾನ್ವಿ :** ಡಾ, ಬಿ.ಆರ್ ಅಂಬೇಡ್ಕರ್ ಅವರು ಬರೆದಿರುವ ಸಂವಿಧಾನ ಗ್ರಂಥವು ಪ್ರತಿಯೊಬ್ಬರಿಗೂ ಕಾನೂನಿನ ಶ್ರೀರಕ್ಷೆ ಇದ್ದ ಹಾಗೆ ಎಂದು ಶಾಸಕ ಹಂಪಯ್ಯ ನಾಯಕ ತಿಳಿಸಿದರು.

ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದ ಟಿ.ಎ.ಪಿ.ಸಿ.ಎಂ.ಎಸ್ ಆವರಣದಲ್ಲಿ ಜರುಗಿದ 75 ನೇ. ವರ್ಷದ ಸಂವಿಧಾನ ಉತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಅಂಬೇಡ್ಕರ್ ಅವರು ಸಂವಿಧಾನ ಬರೆಯದೆ ಇದ್ದರೆ ನಾವು ಯಾವ ಸ್ಥಿತಿಯಲ್ಲಿ ಇರುತ್ತಿದ್ದೆವು, ಅಂಬೇಡ್ಕರ್ ಅವರ ಸಂವಿಧಾನ ದಿಂದಲೇ ನಾನು ಶಾಸಕನಾಗಿ ವೇದಿಕೆ ಮೇಲೆ ನಿಂತು ಮಾತನಾಡುವ ಅವಕಾಶ ಸಿಕ್ಕಿದೆ ಎಂದರು.

ಅಂಬೇಡ್ಕರ್ ಅವರು ಬರೆದ ಸಂವಿಧಾನದ ವಿಧಿಗಳನ್ನು ನೋಡಿದರೆ ಎಲ್ಲಾ ಜಾತಿಯ ಜನಾಂಗದವರಿಗೆ ಸಮಾನತೆ, ಭಾತೃತ್ವದ ಬಗ್ಗೆ ತಿಳಿಸಿದ್ದಾರೆಂದು ಶಾಸಕ ಹಂಪಯ್ಯ ನಾಯಕ ಅವರು ಅಂಬೇಡ್ಕರ್ ಅವರನ್ನು ಬಣ್ಣಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಸೀನಿಯರ್ ನ್ಯಾಷನಲ್ ಸರ್ಕಲ್ ಕಬಡ್ಡಿಯಲ್ಲಿ ಕರ್ನಾಟಕ ರಾಜ್ಯ ತಂಡವನ್ನು ಪ್ರತಿ ನಿಧಿಸುತ್ತಿರುವ - ರೋಣದ ಹೆಮ್ಮೆಯ ಯುವ ಕಬಡ್ಡಿ ಕ್ರೀಡಾಪಟು




**ಸಿಹಿ ಕಹಿ ಸುದ್ದಿ**

**ರೋಣ :** ಕರ್ನಾಟಕ ರಾಜ್ಯ ಅಮೆಚೂರ ಕಬಡ್ಡಿ ಅಸೋಸಿಯೇಷನ್ ಗದಗ ಜಿಲ್ಲಾ ಅಮೆಚೂರ್ ಕಬಡ್ಡಿ ಸಂಸ್ಥೆಯ ಶ್ರೀ ಬಿ.ಸಿ ರಮೇಶ್ ಸರ್ ಕಬಡ್ಡಿ ತರಬೇತಿ ಅಕಾಡೆಮಿ ರೋಣ ಇವರ ಯುವ ಕಬಡ್ಡಿ ಕ್ರೀಡಾಪಟು ಕುಮಾರ ರಮೇಶ. ಎಸ್ ತಲೆವಡಕರ್ ಇವರು ಪಂಜಾಬ ರಾಜ್ಯದ ಚಂಡಿಗಡದಲ್ಲಿ

ದಿನಾಂಕ 30-11-2024 ರಿಂದ 02-12-2024 ರ ವರೆಗೆ ನಡೆಯುತ್ತಿರುವ 17 ನೇಯ ಸೀನಿಯರ್ ನ್ಯಾಷನಲ್ ಸರ್ಕಲ್ ಕಬಡ್ಡಿಯಲ್ಲಿ ಕರ್ನಾಟಕ ರಾಜ್ಯ ತಂಡವನ್ನು ಪ್ರತಿ ನಿಧಿಸುತ್ತಿರುವ ಗದಗ ಜಿಲ್ಲೆಯ ರೋಣದ ಹೆಮ್ಮೆಯ ಯುವ ಕಬಡ್ಡಿ ಕ್ರೀಡಾಪಟು ಆಗಿದ್ದಾನೆ. ಹಲವಾರು ಪಂದ್ಯಗಳನ್ನು ಗೆದ್ದು ಹಲವಾರು ಬಹುಮಾನಗಳನ್ನು ಹಾಗೂ ಹಲವಾರು ಗೋಲ್ಡ್ ಮೆಡಲ್ ಗಳನ್ನು ಪಡೆದಿದ್ದಾನೆ ಇಂತಹ ಮಹಾನ್ ಪ್ರತಿಭೆಗೆ ಮುಂದೆ ಉತ್ತಮ ಸ್ಥಾನಗಳು ಲಭಿಸಲಿ ಎಂದು ನಮ್ಮ ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್ ತಂಡವು ಹಾರೈಸುತ್ತದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಎಸ್.ವಿ. ಸಂಕನಗೌಡ್ರ ರೋಣ.**

## ಎ.ಪಿ.ಎಂ.ಸಿಯ ಸರ್ವ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ: ಕೆಎಂಎಫ್ ಅಧ್ಯಕ್ಷ ಎಸ್.ಭೀಮನಾಯ್ಕ್

**ಸಿಹಿ ಕಹಿ ಸುದ್ದಿ**



**ಕೊಟ್ಟೂರು :** ಎಪಿಎಂಸಿ ಸಭಾಂಗಣದಲ್ಲಿ ನವೆಂಬರ್ 25 ರಂದು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಕರ್ನಾಟಕ ಸರ್ಕಾರ ದಿಂದ ಅಧ್ಯಕ್ಷ ಉಪಾಧ್ಯಕ್ಷ ಹಾಗೂ ಸರ್ವ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಿದ ಸನ್ಮಾನ್ಯ ಶ್ರೀ ಭೀಮನಾಯ್ಕ್ ಕೆಎಂಎಫ್ ಅಧ್ಯಕ್ಷರು ಮತ್ತು ಡಾ, ಶ್ರೀನಿವಾಸ್ ಎನ್.ಟಿ ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರ ರವರು ಕೊಟ್ಟೂರು ದೊ-ರೆ ಶ್ರೀ ಕೊಟ್ರೇಶನ ಆಶೀರ್ವಾದ ದಿಂದ ಹಾಗೂ ಕೃಷಿ ಉನ್ನತ ಮಾರುಕಟ್ಟೆ ಇರುವುದರಿಂದ ವ್ಯಾಪಾರ ವಹಿವಾಟು ಆರ್ಥಿಕ, ಸಾಮಾಜಿಕ ಮನ್ನಣೆಗೆ ಸಹಕಾರಿಯಾಗಿದೆ ಎಂದು ಅಭಿನಂದನಾ ಸ್ವೀಕರಿಸಿ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ನಂತರ ಮಾತನಾಡಿ ಎಲ್ಲಾ ಸದಸ್ಯರು ಕೃಷಿ ಉತ್ಪನ್ನ ಮಾರಾಟ ನೀತಿಯನ್ನು ಪರಿಣಾಮಕಾರಿಯಾಗಿ ಅಳವಡಿಸಿ ಹಾಗೂ ಕೃಷಿ ಮಾರಾಟ ವ್ಯವಸ್ಥೆಯಲ್ಲಿ ದಕ್ಷತೆ, ಪಾರದರ್ಶಕತೆ ಮತ್ತು ಕೃಷಿ ಉತ್ಪನ್ನಕ್ಕೆ ಸಮರ್ಥ ಧಾರಣೆ ಆವಿಷ್ಕಾರ ತಂದು ರೈತರು ಹಾಗೂ ಮಾರುಕಟ್ಟೆ ಭಾಗೀದಾರರಿಗೆ ಅನುಕೂಲ ಕಲ್ಪಿಸಿ, ರೈತರ ಉತ್ಪನ್ನಗಳಿಗೆ ಸ್ಪರ್ಧಾತ್ಮಕ ಬೆಲೆ ದೊರೆಯುವಂತೆ ಮಾಡಿ ಕೃಷಿ ಉತ್ಪನ್ನ ಮಾರುಕಟ್ಟೆಯನ್ನು ಮಾದರಿ ಕೃಷಿ ಉತ್ಪನ್ನ ಮಾರುಕಟ್ಟೆಯನ್ನಾಗಿಸಿ ಎಂದು ಹೇಳಿದರು.

ನಂತರ ಎಪಿಎಂಸಿಯ ಉಪಾಧ್ಯಕ್ಷರು ಪ್ರಾಸ್ತಾವಿಕ ನುಡಿ ನುಡಿದರು ಮತ್ತು ಅಧ್ಯಕ್ಷರು ಕೊಟ್ಟೂರು ಎಪಿಎಂಸಿ ಮಾರುಕಟ್ಟೆ ರೈತರಿಗೆ ಬೇಕಾಗಿರುವ ಮೂಲಭೂತ ಸೌಕರ್ಯಗಳಾದ ಶುದ್ಧ ನೀರಿನ ಘಟಕ, ಹೈಟೆಕ್ ಶೌಚಾಲಯ, 100 ಎಂ.ಟಿ ಸಾಮರ್ಥ್ಯದ ವೇಬ್ರಿಡ್ಜ್ ಇನ್ನೂ ಮುಂತಾದ ಸೌಕರ್ಯಗಳನ್ನು ಒದಗಿಸಿ ಕೊಡಬೇಕೆಂದು ಅಭಿನಂದನೆ ಸಲ್ಲಿಸುವುದರ ಮೂಲಕ ಮನವಿ ಮಾಡಿಕೊಂಡರು. ಈ ಸಂಧರ್ಭದಲ್ಲಿ ದಾರುಕೇಶ್ ಬಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷರು,ರಾಜೇಂದ್ರ ಪ್ರಸಾದ್ ರಾಜ್ಯ ಬೀಜ ನಿಗಮದ ನಿರ್ದೇಶಕರು, ಬದ್ದಿ ರೇಖಾ ರಮೇಶ್ ಪ.ಪಂ ಅಧ್ಯಕ್ಷರು, ಎ.ನಂಜಪ್ಪ ಎಪಿಎಂಸಿಯ ಅಧ್ಯಕ್ಷರು, ಎಂ ಶಿವಣ್ಣ ಉಪಾಧ್ಯಕ್ಷರು ಎಪಿಎಂಸಿ, ವೀರಣ್ಣ ಎಪಿಎಂಸಿ ಕಾರ್ಯದರ್ಶಿ, ಗೂಳಿ ಮಲ್ಲಿಕಾರ್ಜುನ್ ಕೆಪಿಸಿಸಿ ಸದಸ್ಯರು, ಮರಿರಾಮಪ್ಪ ಪುರಸಭೆ ಅಧ್ಯಕ್ಷರು, ಅಡಿಕಿ ಮಂಜುನಾಥ್ ಕಾಂಗ್ರೆಸ್ ಜಿಲ್ಲಾ ಕಾರ್ಯದರ್ಶಿ, ಗೂಳಿ ಬಸಪ್ಪ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ, ಬುದ್ಧಿ ಮರಿಸ್ವಾಮಿ ಡಿ.ಎಸ್.ಎಸ್ ಜಿಲ್ಲಾ ಸಂಚಾಲಕರು, ತಾ.ಪಂ ನಾಮ ನಿರ್ದೇಶಕರು ಕಂದಗಲ್ಲು ಪರಶುರಾಮ್, ಶಿರಿಬಿ ಕೊಟ್ರೇಶ್, ಎಂ.ಓ ಕೊಟ್ರಯ್ಯ ಹಾಗೂ ಸರ್ವ ಸದಸ್ಯರು ಅಕ್ಕಿ ತೋಟೇಶ್, ಡಿಶ್ ಮಂಜುನಾಥ್, ಕೊಟ್ಟೂರು ತಾಲೂಕಿನ ಎಲ್ಲಾ ಕಾಂಗ್ರೆಸ್ ಮುಖಂಡರು ಕಾರ್ಯಕರ್ತರು ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರದೀಪ್.ಕುಮಾರ್.ಸಿ.ಕೊಟ್ಟೂರು**

## ಡಿಸೆಂಬರ 3, 4 ರಂದು ಇಂಚಗೇರಿ ಸಪ್ತಾಹ



**ಬನಹಟ್ಟಿ :** ಇಂಚಗೇರಿ ಆಧ್ಯಾತ್ಮ ಸಾಂಪ್ರದಾಯದ ಭಕ್ತಿ ಪ್ರಚಾರಕರಾಗಿದ್ದ ಬಸಲಿಂಗಪ್ಪ ಮಹಾರಾಜರ ಹಾಗು ಕಾಡಪ್ಪ ಮಹಾರಾಜರ ಪುಣ್ಯತಿಥಿ ಅಂಗವಾಗಿ ಸಪ್ತಾಹ ಕಾರ್ಯಕ್ರಮವು ಡಿಸೆಂಬರ್ 3 ಮತ್ತು 4 ರಂದು ಬನಹಟ್ಟಿಯ ಕೆ.ಎಚ್.ಡಿ.ಸಿ. ಹತ್ತಿರದ ಧ್ಯಾನಾಶ್ರಮದಲ್ಲಿ ನಡೆಯಲಿದೆ ಎಂದು ಯಲ್ಲಪ್ಪ ಮಹಾರಾಜರು ತಿಳಿಸಿದರು.

ಬುಧವಾರ ಕಾರ್ಯಕ್ರಮದ ಪ್ರಚಾರದ ಪರಿಕರ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಡಿಸೆಂಬರ್ 3 ರಂದು ಸಂಜೆ ಜರುಗುವ ಕಾರ್ಯಕ್ರಮದಲ್ಲಿ ಕರಿಕಟ್ಟಿಯ ಡಾ. ಬಸವರಾಜ ಮಹಾಸ್ವಾಮಿಜಿ, ತೇರದಾಳದ ಗುರುಪಾದೇಶ್ವರ ಶ್ರೀ, ಯಲ್ಲಟ್ಟಿಯ ಬಸಪ್ಪ ಮಹಾರಾಜರು, ಜಗದಾಳದ ಈರಪ್ಪ ಮಹಾರಾಜರು, ಅಸ್ಕಿಯ ಸತ್ಯಪ್ಪ ಮಹಾರಾಜರು, ರಾಮಪೂರದ ಶಿವಾನಂದ ಭಸ್ಮೆ, ಗಿರಮಲ್ಲಪ್ಪ ಚನಾಳ ಮಹಾರಾಜರು ಉಪಸ್ಥಿತರಿರುವರು.

ಡಿಸೆಂಬರ್ 4 ರಂದು ಬೆಳಿಗ್ಗೆ 10 ಗಂಟೆಗೆ ಜರುಗುವ ಕಾರ್ಯಕ್ರಮದ ಸಾನಿಧ್ಯವನ್ನು ರೇವಣಸಿದ್ದೇಶ್ವರ ಮಹಾರಾಜರು, ಅಂಬಿಗರ ಚೌಡಯ್ಯ ಪೀಠದ ಶಾಂತಭೀಷ್ಮ ಅಂಬಿಗರ ಚೌಡಯ್ಯ ಸ್ವಾಮೀಜಿ, ಬಂಡಿಗಣಿಯ ಅನ್ನದಾನೇಶ್ವರ ಶ್ರೀಗಳು ವಹಿಸಲಿದ್ದಾರೆ.

ಅತಿಥಿಗಳಾಗಿ ಶಾಸಕ ಸಿದ್ದು ಸವದಿ, ಸಿದ್ಧನಗೌಡ ಪಾಟೀಲ, ಸುರೇಶ ಚಿಂಡಕ, ಸತೀಶ ಹಜಾರೆ, ಸಿದ್ರಾಮ ಸವದತ್ತಿ, ರವಿ ಕರಲಟ್ಟಿ, ರಾಮಣ್ಣ ಭದ್ರನ್ನವರ, ಮಲ್ಲಿಕಾರ್ಜುನ ಬಾಣಕಾರ, ಓಂಪ್ರಕಾಶ ಕಾಬ್ರಾ, ಗೋವಿಂದ ಡಾಗಾ ಭಾಗವಹಿಸಲಿದ್ದಾರೆ.

## ಅಂಗನವಾಡಿ ಕೇಂದ್ರದ ಸ್ಥಳಾಂತರಕ್ಕೆ ಆಗ್ರಹ



**ಚಿಮ್ಮಡ :** ಗಲೀಜು ವಾತಾವರಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಇಲ್ಲಿಯ ಅಂಗನವಾಡಿ ಕೇಂದ್ರವನ್ನು ಬೇರೆಡೆ ಸ್ಥಳಾಂತರಿಸಬೇಕೆಂದು ಎರಡು ಹಾಗೂ ಒಂಬತ್ತನೇ ವಾಡಿ9ನ ನಾಗರಿಕರು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.

ಗ್ರಾಮದ ಕೆರೆ ಅಂಗಳದ ಸಮೀಪವಿರುವ (ಸರಕಾರಿ ಕನ್ನಡ ಗಂಡು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆಯ ಹತ್ತಿರ) ಅಂಗನವಾಡಿ ಕೇಂದ್ರಕ್ಕೆ ಪ್ರತಿದಿನ ಇಪ್ಪತ್ತಕ್ಕೂ ಅಧಿಕ ಮಕ್ಕಳ ಹಾಜರಿಯಿದ್ದು, ಕೇಂದ್ರದ ಪಕ್ಕದಲ್ಲಿಯೇ ಇರುವ ಕೆರೆ ಅಂಗಳಕ್ಕೆ ಈ ಭಾಗದ ಜನರು ಪ್ರತಿದಿನ ಬಯಲು ಬಹಿರ್ದೆಸೆಗೆ ಹೋಗುತ್ತಿರುವುದರಿಂದ ಈ ಭಾಗದ ವಾತಾವರಣವೇ ಗಲೀಜಿನಿಂದ ಕೂಡಿದ್ದು ತೀವ್ರ ದುರ್ವಾಸನೆ ಬೀರುತ್ತಿದೆ. ಇಂತಹ ಅಶುದ್ಧ ಪರಿಸರದಲ್ಲಿ ಪ್ರತಿದಿನ ಮಕ್ಕಳನ್ನು ಪೋಷಿಸ ಲಾಗುತ್ತಿರುವುದರಿಂದ ಇಲ್ಲಿನ ನಾಗರಿಕರಲ್ಲಿ ಆತಂಕ ಮೂಡಿಸಿದೆ.

ಈ ಕುರಿತು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಲಿಖಿತವಾಗಿ ಹಾಗೂ ಮೌಖಿಕವಾಗಿ ಹಲವಾರು ಬಾರಿ ಮನವಿ ಮಾಡಿದ್ದರೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ಮಕ್ಕಳ ಆರೋಗ್ಯದ ಹಿತ ದೃಷ್ಟಿಯಿಂದ ಇಲ್ಲಿರುವ ಅಂಗನವಾಡಿ ಕೇಂದ್ರವನ್ನು ಬೇರೆಡೆಗೆ ಕೂಡಲೇ ಸ್ಥಳಾಂತರಿಸಿ ಈ ಸಮಸ್ಯೆ ನಿವಾರಣೆಗೆ ಕ್ರಮ ಕೈಗೊಳ್ಳಬೇಕೆಂದು ಹಲವಾರು ನಾಗರಿಕರು ಒತ್ತಯಿಸಿದ್ದಾರೆ.

> **ಗ್ರಾಮಸ್ಥರಿಂದ ಈ ಕುರಿತು ದೂರುಗಳು ಬಂದಿದ್ದು ಈ ಅಂಗನವಾಡಿ ಕೇಂದ್ರದ ಸುತ್ತಲಿನ ಸ್ಥಳವನ್ನು ಸ್ವಚ್ಛ ಗೊಳಿಸುವಂತೆ ಗ್ರಾಮ ಪಂಚಾಯತಿಗೆ ಸೂಚಿಸಲಾಗಿದ್ದು, ಹಲವು ಬಾರಿ ಸ್ವಚ್ಛಗೊಳಿಸಲಾಗಿದೆ. ಆದರೂ ಈ ಭಾಗದ ಜನರು ಗಲೀಜು ಮಾಡುವುದು ಬಿಡುತ್ತಿಲ್ಲ. ಸರಕಾರಿ ಕಟ್ಟಡ ಹೊಂದಿರುವ ಅಂಗನವಾಡಿ ಕೇಂದ್ರ ಸ್ಥಳಾಂತರಿಸುವುದೂ ಸೂಕ್ತವಾಗಿಲ್ಲ. ಈ ಕುರಿತು ಶೀಘ್ರದಲ್ಲಿಯೇ ಕೇಂದ್ರಕ್ಕೆ ಭೇಟಿ ನೀಡಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.**
>
> **। ಶರಣಬಸವೇಶ್ವರ ಮ್ಯಾಗೇರಿ.**
> **ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಜಮಖಂಡಿ**

ಈ ಅಂಗನವಾಡಿ ಕೇಂದ್ರದ ಸುತ್ತಲೂ ತುಂಬಾ ಗಲೀಜು ಇದ್ದುದರಿಂದ ಮಕ್ಕಳ ಆರೋಗ್ಯದ ಮೇಲೆ ತೀವ್ರ ಪರಿಣಾಮ ಬೀರುವ ಸಾಧ್ಯತೆಯಿರುವುದರಿಂದ ಹಲವಾರು ಜನ ಪಾಲಕರು ತಮ್ಮ ಮಕ್ಕಳನ್ನು ಅಂಗನವಾಡಿ ಕೇಂದ್ರಕ್ಕೆ ಕಳಿಸುವುದಕ್ಕೆ ಹಿಂದೇಟು ಹಾಕುತ್ತಿದ್ದಾರೆ. ಅದರ ಬದಲಾಗಿ ಈಗ ಖಾಲಿ ಇರುವ ಸರಕಾರಿ ಕನ್ನಡ ಗಂಡು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡಕ್ಕೆ ಕೇಂದ್ರವನ್ನು ಸ್ಥಳಾಂತರಿಸಬೇಕು ಶ್ರೀಶೈಲ ಮಠಪತಿ ಆಗ್ರಹಿಸಿದ್ದಾರೆ.

## ಯುವಕರು ಸಾರ್ವಜನಿಕ ಗ್ರಂಥಾಲಯಗಳ ಸದ್ಬಳಕೆ ಮಾಡಿಕೊಳ್ಳಬೇಕು



**ರಬಕವಿ-ಬನಹಟ್ಟಿ :** ಯುವಕರು ಸಾರ್ವಜನಿಕ ಗ್ರಂಥಾಲಯಗಳ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಬಾಗಲಕೋಟೆ ಜಿಲ್ಲಾ ಕೇಂದ್ರ ಗ್ರಂಥಾಲಯ ಪ್ರಾಧಿಕಾರದ ಸದಸ್ಯ ಯಶವಂತ ವಾಜಂತ್ರಿ ತಿಳಿಸಿದರು.

ಅವರು ಮಂಗಳವಾರ ಇಲ್ಲಿನ ಸಾರ್ವಜನಿಕ ಗ್ರಂಥಾಲಯದಲ್ಲಿ ಗ್ರಂಥಾಲಯದ ಸಪ್ತಾಹದ ಅಂಗವಾಗಿ ಹಮ್ಮಿಕೊಳ್ಳಲಾದ ಪುಸ್ತಕ ಪ್ರದರ್ಶನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಸ್ಥಳೀಯ ಗ್ರಂಥಾಲಯದಲ್ಲಿ ಅಂದಾಜು 23 ಸಾವಿರಕ್ಕೂ ಅಧಿಕ ವಿವಿಧ ಪ್ರಕಾರದ ಗ್ರಂಥಗಳು ಇವೆ. ಇಂದಿನ ದಿನಗಳಿಗೆ ಅವಶ್ಯಕವಾಗಿರುವ ಸ್ಪರ್ಧಾತ್ಮಕ ಪರೀಕ್ಷೆಗಳ ಗ್ರಂಥಗಳು ಕೂಡಾ ದೊರೆಯುತ್ತವೆ. ದಿನ ಪತ್ರಿಕೆಗಳು, ವಾರ ಪತ್ರಿಕೆಗಳು ದೊರೆಯುವುದರಿಂದ ಜ್ಞಾನಾರ್ಜನೆಗೆ ಸಹಾಯವಾಗುತ್ತದೆ ಎಂದು ವಾಜಂತ್ರಿ ತಿಳಿಸಿದರು.

ಮಕ್ಕಳ ಸಾಹಿತಿ ಜಯವಂತ ಕಾಡದೇವರ ಮಾತನಾಡಿ, ಸ್ಥಳೀಯ ಗ್ರಂಥಾಲಯದಲ್ಲಿ ಸಾಕಷ್ಟು ಮೌಲ್ಯಯುತವಾದ ಗ್ರಂಥಗಳ ಸಂಗ್ರಹವಿದೆ. ಸಂಬಂಧಪಟ್ಟ ಇಲಾಖೆಯವರು ಇತ್ತ ಗಮನ ನೀಡಿ ಗ್ರಂಥಾಲಯಕ್ಕೆ ನಿವೇಶನ ನೀಡುವುದರ ಜೊತೆಗೆ ಸ್ವಂತ ಕಟ್ಟಡವಾದರೆ ಗ್ರಂಥಾಲಯದಲ್ಲಿರುವ ಮಹತ್ವದ ಪುಸ್ತಕಗಳನ್ನು ರಕ್ಷಣೆ ಮಾಡಲು ಸಾಧ್ಯವಾಗುತ್ತದೆ. ದಿನ ಪತ್ರಿಕೆಗಳ ಓದಿನಿಂದ ನಮ್ಮ ಜ್ಞಾನ ಹೆಚ್ಚಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ದಿನಪತ್ರಿಕೆಗಳನ್ನು ಓದುವುದನ್ನು ರೂಢಿಸಿಕೊಳ್ಳಬೇಕು. ಕಾದಂಬರಿ ಮತ್ತು ಪಠ್ಯ ಪುಸ್ತಕಗಳ ಸಂಗ್ರಹ ಕೂಡಾ ಇದೆ ಎಂದು ತಿಳಿಸಿದರು.

ಗ್ರಂಥಪಾಲಕ ಎಂ. ಡಿ. ಭಜಂತ್ರಿ, ಸಹಾಯಕ ಸತೀಶ ಬಡಿಗೇರ, ನಗರದ ಮುಖಂಡ ಶೇಖರ ಹಕ್ಕಲದಡ್ಡಿ, ಪ್ರಕಾಶ ಬಾಣಕಾರ, ಪ್ರಕಾಶ ಅರಳಿಕಟ್ಟಿ, ಶೇಖರ ಪರೀಟ, ಸಂತೋಷ ಸುಟ್ಟಟ್ಟಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಕೆಎಚ್‌ಡಿಸಿ ನೇಕಾರರ ಅನಿರ್ದಿಷ್ಟಾವಧಿಯ ಮುಷ್ಕರ



**ಬನಹಟ್ಟಿ :** ಇಲ್ಲಿಯ ಕೆ. ಎಚ್. ಡಿ. ಸಿ. ನೇಕಾರರು ತಮ್ಮ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಬುಧವಾರದಿಂದ ಬನಹಟ್ಟಿಯ ಕೆ. ಎಚ್. ಡಿ. ಸಿ. ಕಾರ್ಯಾಲಯದ ಮುಂಭಾಗದಲ್ಲಿ ಅನಿರ್ದಿಷ್ಟಾವಧಿಯ ಮುಷ್ಕರ ಆರಂಭಿಸಿದರು.

ಕರ್ನಾಟಕ ರಾಜ್ಯ ನೇಕಾರ ಸೇವಾ ಸಂಘದ ಅಧ್ಯಕ್ಷ ಶಿವಲಿಂಗ ಟಿರಕಿ ಮಾತನಾಡಿ, ಹತ್ತಾರುವರ್ಷಗಳಿಂದನಿಗಮದಅಡಿಯಲ್ಲಿ ನೇಕಾರಿಕೆ ಉದ್ಯೋಗ ಮಾಡುತ್ತಿರುವ ನೇಕಾರರು ಇಂದು ನಿವೇಶನ ದೊರೆಯದೆ ಬಾಡಿಗೆ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ. ನಿಗಮದಲ್ಲಿ ವರ್ಷದಲ್ಲಿ ಕೇವಲ ಆರೇಳು ತಿಂಗಳು ಮಾತ್ರ ಉದ್ಯೋಗ ನೀಡುತ್ತಿದ್ದಾರೆ. ಬೆಳಿಗ್ಗೆಯಿಂದ ಸಂಜೆಯವರೆಗೆ ನೇಯ್ಗೆ ಮಾಡಿದರೂ ಉಪಜೀವನಕ್ಕೆ ಬೇಕಾದ ಕೂಲಿಯೂ ಕೂಡಾ ದೊರೆಯುತ್ತಿಲ್ಲ. ನಾಲ್ಕು ದಶಕಗಳಿಂದ ಮನೆ ಕಟ್ಟಿಕೊಂಡು ವಾಸ ಮಾಡುತ್ತಿರುವ ಮೂರು ನೂರಕ್ಕೂ ಹೆಚ್ಚು ಮನೆಗಳಿಗೆ ಸಿಟಿಎಸ್ ಉತಾರೆಯನ್ನು ಸಂಬಂಧಪಟ್ಟಇಲಾಖೆಯವರುನೀಡುತ್ತಿಲ್ಲ. ಆದ್ದರಿಂದ ನೇಕಾರರು ಅನಿರ್ದಿಷ್ಟಾವಧಿಯವರೆಗೆ ಮುಷ್ಕರ ನಡೆಸುತ್ತಿದ್ದಾರೆ.

ಸಿಟಿಎಸ್ ಉತಾರೆಯನ್ನು ನೀಡುವ ಕುರಿತು ಮತ್ತು ನಿಗಮದಲ್ಲಿ ನೂರಾರು ಕೋಟಿ ಅವ್ಯವಹಾರ ನಡೆದಿರುವ ಕುರಿತು ತನಿಖೆಯಾಗಬೇಕುಎಂದುಬನಹಟ್ಟಿಯಿಂದ ಹುಬ್ಬಳ್ಳಿಯವರೆಗೆ ನೂರಾರು ಸಂಖ್ಯೆಯಲ್ಲಿ ನೇಕಾರರು ಪಾದಯಾತ್ರೆ ನಡೆಸಿದರು.

ನಂತರ ನಿರಂತರ ಉದ್ಯೋಗ ಮತ್ತು ಮೂಲ ಸೌಕರ್ಯಗಳಿಗಾಗಿ 17 ದಿನಗಳ ಕಾಲ ಗಂಜಿ ಹೋರಾಟ ನಡೆಸಿ ಪ್ರತಿಭಟನೆಯನ್ನು ಮಾಡಲಾಯಿತು. ಆದರೂ ಯಾವುದೇ ರೀತಿಯಲ್ಲಿ ಪ್ರಯೋಜನವಾಗಿಲ್ಲ.

ಈಕುರಿತುಮುಖ್ಯಮಂತ್ರಿ,ಜವಳಿಸಚಿವರಿಗೆ, ಶಿಕ್ಷಣ ಸಚಿವರಿಗೆ, ಸ್ಥಳೀಯ ಶಾಸಕರಿಗೆ, ಸಂಸದರಿಗೆ ಹಾಗೂ ಸಂಬಂಧಪಟ್ಟ ಎಲ್ಲ ಇಲಾಖೆಯ ಅಧಿಕಾರಿಗಳಿಗೆ ಹಲವಾರು ಬಾರಿ ಮನವಿಯನ್ನು ಸಲ್ಲಿಸಿದರೂ ಯಾರೊಬ್ಬರೂ ನೇಕಾರರ ಸಮಸ್ಯೆಗಳ ಕುರಿತುಮಾತನಾಡುತ್ತಿಲ್ಲ.ಮುಷ್ಕರನಡೆದಾಗ ಅಧಿಕಾರಿಗಳು ಆಗಮಿಸಿ ಮೂಲ ಸೌಕರ್ಯ ಮತ್ತು ನಿರಂತರ ಉದ್ಯೋಗ ನೀಡುವುದಾಗಿ ಭರವಸೆಯನ್ನು ನೀಡುತ್ತಾರೆಯೇ ವಿನಃ ಅದು ಕಾಯ9ರೂಪಕ್ಕೆ ಬರುವುದಿಲ್ಲ. ಆದಷ್ಟು ಬೇಗನೆ ಸರ್ಕಾರ ನೇಕಾರರ ಸಮಸ್ಯೆಗಳಿಗೆ ಸ್ಪಂದಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟಕ್ಕೂ ಮುಂದಾಗುತ್ತೇವೆ ಎಂದು ಶಿವಲಿಂಗ ಟಿರಕಿ ಎಚ್ಚರಿಕೆಯನ್ನು ನೀಡಿದರು.

ನೇಕಾರರು ದಿವಂಗತ ಪಿ. ಎಂ. ಬಾಂಗಿಯವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮುಷ್ಕರ ಆರಂಭಿಸಿದರು.

ಈ ಸಂದರ್ಭದಲ್ಲಿ ರಾಜೇಂದ್ರ ಮಿರ್ಜಿ, ಸದಾಶಿವ ಬರಗಿ, ಶ್ರೀಶೈಲ ಮುಗಳೊಳ್ಳಿ, ಬಸಪ್ಪ ಅಮಟಿ, ಸದಾಶಿವ ಗೊಂದಕರ್, ಮಲಿಕ್ ಜಮಾದಾರ, ಸಾವಿತ್ರಿ ಜಾಲಿಕಟ್ಟಿ, ಜಯವಂತ ಅಥಣಿ, ಶಂಕ್ರೆವ್ವ ಹುಣಶ್ಯಾಳ, ನಿರ್ಮಲಾ ಶಿವಮಾಳದೆ, ಅನಸೂಯಾ ನಿರ್ವಾಣಿ, ಸಂಗಪ್ಪ ಹೊಸೂರ, ಬಸು ದಡ್ಡಲಕ್ಕಣವರ, ಶೇಖ ಸೇರಿದಂತೆ ಇನ್ನೂ ಅನೇಕರು ಹಾಜರಿದ್ದರು.



ಎರಡನೆಯ ಮಕ್ಕಳ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷೆಯಾಗಿ ಆಯ್ಕೆಯಾಗಿರುವ ರಬಕವಿಯ ಕುಮಾರಿ. ಸುಹಾನಿ ಗಿರೀಶ ಮುತ್ತೂರ ಇವರಿಗೆ ಶೈಲಜಾ ಮಿರ್ಜಿ ಅವರು ಆಹ್ವಾನ ಪತ್ರಿಕೆ ನೀಡಿದರು.

## ಸ್ನೇಹ ಜೀವಿಗಳ ಬಳಗದಿಂದ ಗುರುವಂದನೆ



**ಬಾಗಲಕೋಟೆ :** ತಾಲೂಕಿನ ನೀರಲಕೇರಿ ಗ್ರಾಮದಲ್ಲಿ ಸ್ನೇಹ ಜೀವಿಗಳ ಬಳಗದ ವತಿಯಿಂದ ಮಕ್ಕಳ ದಿನಾಚರಣೆ ಅಂಗವಾಗಿ ಗುರುವಂದನಾ & ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಅದೇ ರೀತಿ ಮಕ್ಕಳಿಗಾಗಿ ರಂಗೋಲಿ ಸ್ಪರ್ಧೆ ಮತ್ತು ರಸಪ್ರಶ್ನೆಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು.

ರಸಪ್ರಶ್ನೆಸ್ಪರ್ಧೆಯಲ್ಲಿಪ್ರಥಮ ಸ್ಥಾನ:ಅಕ್ಕಮಹಾದೇವಿ ತಂಡ. ದ್ವಿತೀಯ ಸ್ಥಾನ : ವಿನಾಯಕ್ ನಾಡಗೇರಿ ತಂಡ ತೃತೀಯ ಸ್ಥಾನ : ಇಮ್ಮಡಿ ಪುಲಕೇಶಿ ತಂಡ.

ರಂಗೋಲಿ ಸ್ಪರ್ಧೆಯಲ್ಲಿ ಸುಶ್ಮಿತಾ ಮಲ್ಲಾಪುರ (ಪ್ರಥಮ) ಸಂಗೀತಾ ತೇಲಿ (ದ್ವಿತೀಯ) ಸಂಗೀತಾ ಕೋಟಿ (ತೃತೀಯ) ಬಹುಮಾನಗಳನ್ನು ಪಡೆದುಕೊಂಡಿದ್ದಾರೆ. ಗುರುವಂದನಾ ಕಾರ್ಯಕ್ರಮದಲ್ಲಿ ನಿವೃತ್ತಗೊಂಡಿರುವ ಶಿಕ್ಷಕರಾದ ಕೆ ಟಿ ಲಮಾಣಿ ಆರ.ಆರ್ ಇಂಗಳಗಿ ಆಯ. ಎಸ್. ಮಂಟೂರ್ ಎಸ್. ಎಚ್. ಹಾದಿಮನಿ ಶಿಕ್ಷಕಿ ಪಡೆಯನ್ನವರ ಗುರುಗಳನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷ ರಂಗಪ್ಪ ವಾಯ್ ಪೂಜಾರ್, ಪ್ರಾಥಮಿಕ ಶಾಲೆಯ ಎಸ್ ಡಿಎಂ ಸಿ ಅಧ್ಯಕ್ಷರಾದ ಸಿದ್ದನಗೌಡ ಎಚ್ ಗೌಡರ, ಗ್ರಾಮ ಪಂಚಾಯತ್ ಸದಸ್ಯರಾದ ವಿಠ್ಠಲ್ ಎಸ್ ಭಗವತಿ, ಗೌಡಪ್ಪ ಬಿ ಗೌಡರ, ಈರನಗೌಡ ಬಿ ಪಾಟೀಲ್, ಪ್ರಿಯಾಂಕಾ ಉಪಸ್ಥಿತರಿದ್ದರು

ಕಾರ್ಯಕ್ರಮವನ್ನು ಬಸನಗೌಡ ಆರ್ ಪಾಟೀಲ್ ನಿರೂಪಣೆ ಮಾಡಿದರು, ರಂಗಪ್ಪ ಟಿ ಶಿಕ್ಕೇರಿ ಸ್ವಾಗತಿಸಿದರು. ಪ್ರಶಾಂತ್ ವಾಯ್ ಸೊನ್ನದ ವಂದನಾರ್ಪಣೆ ಮಾಡಿದರು. ಸ್ನೇಹಜೀವಿಗಳ ಬಳಗದ ಎಲ್ಲಾ ಸದಸ್ಯರು ಉಪಸ್ಥಿತರಿದ್ದರು.

## ಹಿರೇಮಠದ ಡಾ। ಚಂದ್ರಶೇಖರ ಶ್ರೀಗಳಿಗೆ ಕರ್ನಾಟಕ ರತ್ನ ಪ್ರಶಸ್ತಿ



**ಲೋಕಾಪುರ :** ಬೆಂಗಳೂರಿನ ಭಾರತ ಸ್ಕೌಟ್ಸ್ ಹಾಗೂ ಗೈಡ್ಸ್ ಅಡಿಟೋರಿಯಂ ನಲ್ಲಿ ಸುವರ್ಣ ಕರ್ನಾಟಕ ಕಾರ್ಮಿಕ ವೇದಿಕೆಯಿಂದ ಕನ್ನಡ ರಾಜ್ಯೋತ್ಸವ ಪ್ರಯುಕ್ತ ಕೊಡ ಮಾಡುವ ಹೆಮ್ಮೆಯ ಕರ್ನಾಟಕ ರತ್ನ ಪ್ರಶಸ್ತಿಯನ್ನು ಪಟ್ಟಣದ ಹಿರೇಮಠದ ಡಾ। ಚಂದ್ರಶೇಖರ ಹಿರೇಮಠ ಶ್ರೀಗಳಿಗೆ ನೀಡಿ ಗೌರವಿಸಲಾಯಿತು.

ಈ ವೇಳೆ ಚಿತ್ರನಟಿ ಪ್ರೇಮಾ, ನಿರ್ದೇಶಕ ಪ್ರತಾಪಸಿಂಹ, ಸುವರ್ಣ ಕರ್ನಾಟಕ ಕಾರ್ಮಿಕ ವೇದಿಕೆ ಅಧ್ಯಕ್ಷ ಡಾ। ಹುಸೇನಸಾಬ ಕೆರೂರ, ನಟ ಅಂಜನ ದುಬೈ, ಉದ್ಯಮಿ ಶೇಖ್‌ಅಲಿ ಮುಂತಾದವರು ಇದ್ದರು.

## ಸಮಾಜದಲ್ಲಿ ಮೂಢನಂಭಿಕೆ ವ್ಯವಸ್ಥೆ ಹೋಗಲಿ: ಚಿಮ್ಮನಕಟ್ಟಿ

**ಗುಳೇದಗುಡ್ಡ :** ಶ್ರೀ ಗುರುಬಸವ ದೇವರ ಪಟ್ಟಾಭಿಷೇಕ ಮಹೋತ್ಸವ ಬಹಳಷ್ಟು ವೈಭವದಿಂದ ನಡೆಯಲಿದೆ. ಇದೊಂದು ಬಹಳಷ್ಟು ಅದ್ಭುತ ಕಾರ್ಯಕ್ರಮ. ನಿಜಗುಣಾನಂದ ಪೂಜ್ಯರ ಪ್ರವಚನ ಸಮಾಜವನ್ನು ತಿದ್ದುವ ಕೆಲಸ ಮಾಡುತ್ತದೆ. ಸಮಾಜದಲ್ಲಿನ ಜಾತಿ ವ್ಯವಸ್ಥೆ ಅಳಿಸುವ ಕೆಲಸವನ್ನು ಪೂಜ್ಯರು ಮಾಡುತ್ತಿರುವುದು ಶ್ಲಾಘನೀಯವಾಗಿದೆ ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು.

ಅವರು ಪಟ್ಟಣದ ಶ್ರೀ ಜಗದ್ಗುರು ಗುರುಸಿದ್ದೇಶ್ವರಬೃಹನ್ಮಠದಲ್ಲಿಶ್ರೀಜಗದ್ಗುರು ಗುರುಸಿದ್ಧ ಪಟ್ಟದಾರ್ಯ ಮಹಾಸ್ವಾಮಿಗಳ 39ನೇ ವಾರ್ಷಿಕ ಪುಣ್ಯಾರಾಧನೆ, ಶರಣ ಸಂಗಮ ಸಮಾರಂಭದ ನಿಮಿತ್ತವಾಗಿ ಆಯೋಜಿಸಿರುವ ಶರಣರ ಅನುಭಾವ ದರ್ಶನ ಪ್ರವಚನ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿ,



ಗುರುಬಸವ ದೇವರ ಪಟ್ಟಾಭಿಷೇಕದ ಯಶಸ್ವಿಗೆ ನಾವೆಲ್ಲ ಸಾಕಷ್ಟು ಶ್ರಮ ವಹಿಸಿ ಕೆಲಸ ಮಾಡಬೇಕಾಗಿದೆ. ಸಮಾಜವನ್ನು ಬದಲಾವಣೆ ಮಾಡುವುದು ಕಷ್ಟದ ಕೆಲಸ. ಈಗ ನಿಜಗುಣಾನಂದ ಶ್ರೀಗಳು ತಮ್ಮ ಮಾತುಗಳ ಮೂಲಕ ಲೋಕದಲ್ಲಿ ಜಾತಿ, ಮೇಲು, ಕೀಳು ಭಾವನೆ ತೊಡೆದು ಹಾಕುವ ಕೆಲಸದಲ್ಲಿ ತೊಡಗಿದ್ದಾರೆ. ಮೂಢನಂಭಿಕೆ, ಜಾತಿ ವ್ಯವಸ್ಥೆ ದೂರವಾಗಬೇಕು. ಪೂಜ್ಯರು, ಸಂತರು, ಮಹಾತ್ಮರು ಹಾಕಿಕೊಟ್ಟ ಸನ್ಮಾರ್ಗದಲ್ಲಿ ನಾವು ನಡೆಯಬೇಕು ಎಂದರು.

ಶ್ರೀನಿಜಗುಣಪ್ರಭು ತೋಂಟದಾರ್ಯ ಶ್ರೀಗಳು ಸಾನಿಧ್ಯ ವಹಿಸಿ ಮಾತನಾಡಿ, ಪ್ರಕೃತಿ ಮುಂದೆ ನಾವು ಯಾರೂ ದೊಡ್ಡವರಲ್ಲ. ಪ್ರಕೃತಿ ಹಾಗೂ ದೇವರ ಮುಂದೆ ನಮ್ಮದೇನೂ ನಡೆಯುವುದಿಲ್ಲ. ಮನುಷ್ಯನು ಈ ಜಗತ್ತಿನಲ್ಲಿ ಪರಿಪೂರ್ಣತೆ ಹೊಂದಬೇಕಾದರೆ ಧರ್ಮದ ಶಾಸ್ತ್ರದ ವಿಚಾರ ಧಾರೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಮನುಷ್ಯನಿಗೆ ಬಹಳ ಮುಖ್ಯವಾಗಿ ಬೇಕಾಗಿರುವುದು ಧರ್ಮ, ಶಾಸ್ತ್ರಗಳ ಅಧ್ಯಯನ. ಸಾಧು, ಸಂತರ, ಮಹಾತ್ಮರ ಆದರ್ಶ ನಮ್ಮ ಬದುಕನ್ನು ಪಾವನಗೊಳಿಸುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಶರಣ ಸಂಗಮ ಸಮಾರಂಭ ಸ್ವಾಗತ ಸಮಿತಿ ಸರ್ವಾಧ್ಯಕ್ಷ, ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವರನ್ನು ಪಟ್ಟಸಾಲಿ ನೇಕಾರ ಗುರುಪೀಠದ ನಿಯೋಜಿತ ಪೀಠಾಧಿಕಾರಿ ಶ್ರೀಗುರುಬಸವ ದೇವರು ಸನ್ಮಾನಿಸಿ ಗೌರವಿಸಿದರು.

ಶ್ರೀಜಗದ್ಗುರು ಬಸವರಾಜ ಪಟ್ಟದಾರ್ಯ ಸ್ವಾಮೀಜಿ, ಶ್ರೀಗುರುಬಸವ ದೇವರು, ನಾಗೇಶಪ್ಪ ಪಾಗಿ, ಸಂಜಯ ಬರಗುಂಡಿ, ಸಂಗನಬಸಪ್ಪ ಚಿಂದಿ, ಶಿವಾನಂದ ನಾರಾ ಇತರರು ಇದ್ದರು.

## ಕನಕರ ತತ್ವಚಿಂತನೆ ಮನುಕುಲಕ್ಕೆ ಸಂಜೀವಿನಿ: ಮಾಲೋಜಿ



**ಜಮಖಂಡಿ :** ಕೀರ್ತನೆಗಳ ಹರಿಕಾರ ಭಕ್ತ ಕನಕದಾಸರ ಚರಿತ್ರೆ ಆವರ್ಣಿನೀಯವಾಗಿದೆ. ಅವರ ಸಕಲ ಚಿಂತನೆಗಳ ತತ್ವಸಾರಗಳು ಇಡೀ ಮನುಕುಲಕ್ಕೆ ಬೆಳಕಾಗಿವೆ. ಮನುತತ್ವದ ಒಳಗಣ್ಣು ತೆರೆಸಿವೆ. ಜ್ಞಾನೋದಯದ ರಸವೋನ್ನತಿ ಉಣಬಡಿಸಿದ್ದು, ಅವು ಬದುಕಿನ ಉನ್ಮಾದಕ್ಕೆ ಬೆಳಕಾಗಿವೆ ಎಂದು ಪ್ರಭಾರ ಮುಖ್ಯಶಿಕ್ಷಕ ಬಸವರಾಜ ಜಾಲೋಜಿ ಹೇಳಿದರು.

ತಾಲೂಕಿನ ಚಿಕ್ಕಪಡಸಲಗಿಯ ಗದಗ ತೋಂಟದಾರ್ಯ ವಿದ್ಯಾಪೀಠ ಸಂಸ್ಥೆ ಶಿವಶರಣ ಹರಳಯ್ಯ ಸ್ಮಾರಕ ಪ್ರೌಢ ಶಾಲೆಯಲ್ಲಿ ದಾಸಶ್ರೇಷ್ಠ ಕನಕದಾಸರ ಜಯಂತಿ ಹಾಗೂ ಕನ್ನಡ ಕುಲಗುರು ಲಿಂ,ತೋಂಟದ ಡಾ.ಸಿದ್ದಲಿಂಗಶ್ರೀ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸಮಾಜದ ಹಿಂದುಳಿದ ಕುಟುಂಬದಲ್ಲಿ ಜನಿಸಿ ತಮ್ಮ ವೈಚಾರಿಕ ಕೃತಿಗಳ ಮೂಲಕ ಗುರುತಿಸಿಕೊಂಡಿರುವ ಕನಕರು ಶ್ರೇಷ್ಠ ವಿದ್ವಾಂಸರು. ಜಾತಿಮತ, ಕುಲಗೋತ್ರಗಳಿಗೆ ಅಂಟಿಕೊಳ್ಳದೇ ಮನುಕುಲದ ದಿವ್ಯತೆಗೆ ಮಹತ್ವ ನೀಡಿದ್ದಾರೆ. ತಮ್ಮದೇ ಬುದ್ದಿವಂತಿಕೆ, ಚುರುಕತನದ ಆಲೋಚನಾ ಲಹರಿಯ ಪ್ರಜ್ಞೆಯಿಂದ ಸಾಹಿತ್ಯ, ಕೃತಿಗಳ ಮೂಲಕ ಅನ್ಯೋನ್ಯ ಸಂದೇಶಗಳನ್ನು ಸಮಾಜದ ಒಳಿತಿಗೆ ನೀಡಿದ್ದಾರೆ. ದಾಸನಾಗು ವಿಶೇಷನಾಗು ಶ್ರೇಷ್ಠನಾಗು ಕನಕರ ಮೂಲಮಂತ್ರದ ಕೀರ್ತನಾತತ್ವ ಮನಮುಟ್ಟುವಂತೆ ಹೃದಯಗಳಿಗೆ ತಟ್ಟಿವೆ. ಅವರು ರಚಿಸಿದ ನೂರಾರು ಕಾವ್ಯ, ಕೀರ್ತನೆಗಳು ಇಂದಿಗೂ ಜನಮಾನಸದಲ್ಲಿ ನಲಿದಾಡುತ್ತಿವೆ. ಅಷ್ಟೊಂದು ಮೌಲ್ಯಭರಿತ ಶಕ್ತಿ ಹೊಂದಿವೆ ಎಂದರು.

ವಿಶ್ರಾಂತ ಶಿಕ್ಷಕ ಬಸವರಾಜ ಅನಂತಪೂರ, ಸಮಾಜದ ಅಂಕುಡೊಂಕುಗಳನ್ನು ತಿದ್ದಿರುವ ದಾಸಶ್ರೇಷ್ಠ ಕನಕದಾಸರ ಸಾಧನೆ, ಬದುಕಿನ ಮೌಲ್ಯ ನಮಗೆಲ್ಲ ಪ್ರೇರಣೆಗಳಾಗಿವೆ. ಮಕ್ಕಳು ಇಂಥ ಸಾಧಕರ ಜೀವನ ಚರಿತ್ರೆಯನ್ನು ಮೆಲುಕು ಹಾಕಿ ತತ್ವಾದರ್ಶಗಳನ್ನ ಅಳವಡಿಸಿಕೊಳ್ಳಬೇಕು ಎಂದರು

ವೇದಿಕೆಯಲ್ಲಿ ಶಿಕ್ಷಕರಾದ ಈರಪ್ಪ ದೇಸಾಯಿ, ಲೋಹಿತ ಮಿರ್ಜಿ, ಕುಮಾರ ವಾಣಿ, ಜಿ.ಆರ್. ಜಾಧವ, ಕವಿತಾ ಅಂಬಿ, ಸಹನಾ ಕಲ್ಯಾಣಿ (ಹತ್ತಳ್ಳಿ), ಪ್ರಮೀಳಾ ತೇಲಸಂಗ ಸಹಿತ ಹಲವರು ಇದ್ದರು.

## ಶ್ರೀ ಕನಕ ಪುಷ್ಪ ಪ್ರಶಸ್ತಿ ಡಾ. ಗಣೇಶ ಚಿತ್ರಗಾರರಿಗೆ ಗೌರವ



**ಬಾಗಲಕೋಟೆ:**ಕಮತಗಿಯಜ್ಯೋತಿಷ್ಯವಿದ್ವಾಂಸಮತ್ತುಪ್ರಶಸ್ತಿಪುರಸ್ಕೃತ ಡಾ. ಗಣೇಶ ಚಿತ್ರಗಾರ ಅವರಿಗೆ ಬಾಗಲಕೋಟೆ ನವನಗರದ ಕಾಳಿದಾಸ ಶಿಕ್ಷಣ ಸಂಸ್ಥೆ ಆವರಣದಲ್ಲಿ ನಡೆದ ದಾಸ ಶ್ರೇಷ್ಠ ಶ್ರೀ ಕನಕದಾಸರ 537ನೇ ಜಯಂತಿ ಮಹೋತ್ಸವದ ಸಂದರ್ಭದಲ್ಲಿ "ಶ್ರೀ ಕನಕ ಪುಷ್ಪ ಪ್ರಶಸ್ತಿ" ನೀಡಿ ಗೌರವಿಸಲಾಯಿತು. ಈ ಕಾರ್ಯಕ್ರಮವು ಶ್ರೀ ಕನಕದಾಸರ ಭಕ್ತಿಗೀತೆಗಳ ಗಾನ, ಪ್ರವಚನ ಮತ್ತು ಕನ್ನಡ ಸಂಸ್ಕೃತಿಯ ಸಾರವನ್ನು ಅಭಿವ್ಯಕ್ತಿಸುವ ಮೂಲಕ ಅದ್ದೂರಿಯಾಗಿ ಆಚರಿಸಲಾಯಿತು. ಡಾ. ಗಣೇಶ ಚಿತ್ರಗಾರರ ಜ್ಯೋತಿಷ್ಯ ಕ್ಷೇತ್ರದ ಸೇವೆಯನ್ನು ಸ್ಮರಿಸಿ, ಅವರು ಸಾಧಿಸಿರುವ ಸಾಧನೆಗೆ ಈ ಪ್ರಶಸ್ತಿಯನ್ನು ಸಮರ್ಪಿಸಿದರು.

## ರಕ್ತದಾನಕ್ಕಿಂತ ಶ್ರೇಷ್ಠವಾದ ದಾನ ಬೇರೊಂದಿಲ್ಲ: ವಸುಧಾ ನಾರ್ವೇಕರ್



**ಬಾಗಲಕೋಟೆ :** ರಕ್ತದಾನವು ಅತ್ಯಂತ ಶ್ರೇಷ್ಠವಾದ ದಾನವಾಗಿದ್ದು ಎಲ್ಲರೂ ಸ್ವಯಂ ಪ್ರೇ–ರಿತರಾಗಿ ರಕ್ತದಾನಕ್ಕೆ ಮುಂದಾಗಬೇಕಿದೆ ಎಂದು ಶ್ರೀ ರಂಗನಾಥ ಅಂತಾರಾಷ್ಟ್ರೀಯ ಶಾಲೆಯ ಉಪಪ್ರಾಚಾರ್ಯೆ ವಸುಧಾ ನಾರ್ವೇಕರ್ ಅವರು ಇಂದಿಲ್ಲಿ ಹೇಳಿದರು. ಬೇವಿನಮಟ್ಟಿ ಸಮೀಪದ ಶ್ರೀ ರಂಗನಾಥ ಅಂತಾರಾಷ್ಟ್ರೀಯ ಶಾಲೆ ಹಾಗೂ ಜಿಲ್ಲಾ ಆಸ್ಪತ್ರೆ ಬಾಗಲಕೋಟೆ ಇವರ ಸಹಯೋಗದಲ್ಲಿ ರಂಗನಾಥ ಶಾಲೆಯಲ್ಲಿ ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ ಭಾಗಿಯಾಗಿ ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡಿ ಅವರು ಮಾತನಾಡಿರು. ವೈದ್ಯಕೀಯ ಲೋಕವು ಎಷ್ಟೇ ಮುಂದುವರೆದಿದ್ದರೂ ಕೂಡಾ ರಕ್ತಕ್ಕೆ ಮಾತ್ರ ಪರ್ಯಾಯ ವ್ಯವಸ್ಥೆ ಇಲ್ಲ. ರಕ್ತಕ್ಕೆ ರಕ್ತವೇ ಔಷಧವಾಗಿರುವುದರಿಂದ ಎಲ್ಲರೂ ಈ ರೀತಿಯ ಸಾಮಾಜಿಕ ಕಳಕಳಿಯ ಕೆಲಸಕ್ಕೆ ಮುಂದಾಗಬೇಕಿದೆ ಎಂದರು. ದಿನಾಂಕ 15–11–2024 ಮತ್ತು 16–11–2024 ಈ ಎರಡು ದಿನಗಳವರೆಗೆ ನಡೆದ ಈ ಶಿಬಿರದಲ್ಲಿ ಶಾಲೆಯ ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿಗಳು, ಪಾಲಕರು ಸೇ–ರಿದಂತೆ 20 ಜನರು ರಕ್ತದಾನ ಮಾಡಿ, ಪ್ರಶಂಸನೀಯ ಪತ್ರಗಳನ್ನು ಪಡೆದುಕೊಂಡರು. ಈ ಸಂದರ್ಭದಲ್ಲಿ ಶಾಲೆಯ ಪ್ರಾಚಾರ್ಯ ವಿಕ್ರಮ್ ನಾರ್ವೇಕರ್, ಸಂಗಮೇಶ ಹತ್ತರಕಿಹಾಳ, ಕೃಷ್ಣಾ ಝಿಂಗಾಡೆ, ಅಮರೇಶ ಹುಣಸಗಿ ಹಾಗೂ

ಜಿಲ್ಲಾ ಆಸ್ಪತ್ರೆಯ ರಕ್ತಕೇಂದ್ರದ ವೈದ್ಯಾಧೀಕಾ–ರಿಗಳಾದ ಡಾ॥ ಪಾಂಡುರಂಗ ದೊಡಮನಿ ಹಾಗೂ ಸಿಬ್ಬಂದಿಗಳಾದ ಬಿ.ಎ. ಮುದಗಲ್ಲ, ಮಹೇಶ ವಡ್ಡರಕಲ್ಲ, ಅಂಬಾಸಾ ಭಾಂಡಗೆ, ರುದ್ರಮ್ಮ ಉಳ್ಳಿ, ಬಸವರಾಜ ಕೊಪ್ಪಳ, ಫರೀದಖಾನ್ ಡಂಗಿ ಸೇ–ರಿದಂತೆ ಇತರರು ಹಾಜರಿದ್ದರು.

## ಕೆ.ಆರ್.ಪೇಟೆಯಲ್ಲಿ ಚಡ್ಡಿ ಗ್ಯಾಂಗ್ ಕರಿನೆರಳು.! ಆತಂಕದಲ್ಲಿ ಸಾರ್ವಜನಿಕರು



**ಕೆ. ಆರ್. ಪೇಟೆ :** ಚಡ್ಡಿ ಗ್ಯಾಂಗ್ ಮಾದರಿಯಲ್ಲೆ ಮಾರಕಾಸ್ತ್ರ ಹಿಡಿದು ದರೋಡೆಗೆ ಯತ್ನ.ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ಪಟ್ಟಣದ ಹಳೆ ಮೈಸೂರು ರಸ್ತೆಯಲ್ಲಿ ಘಟನೆ.ಕೆ.ಆರ್.ಪೇಟೆ ಪಟ್ಟಣದ ನಿವಾಸಿ ಇಂದ್ರಮ್ಮ ರಂಗನಾಥ ನಿವಾಸದ ಮೇಲೆ ದರೋಡೆಗೆ.ದ–ರೋಡೆಕೋರರ ಚಲನ ವಲನ ಸಿ.ಸಿ ಕ್ಯಾಮರದಲ್ಲಿ ಸೆರೆ. ಘಟನೆಯಿಂದ ಕೆ.ಆರ್ ಪೇಟೆ ಪಟ್ಟಣದ ನಿವಾಸಿಗಳಲ್ಲಿ ಹೆಚ್ಚಿದ ಆತಂಕ.ಆರೋಪಿಗಳ ಪತ್ತೆಗಾಗಿ ಕೆ.ಆರ್ ಪೇಟೆ ಪಟ್ಟಣ ಪೊಲೀಸ್ ರಿಂದ ಕಾರ್ಯಾಚರಣೆ.ಕೆ.ಆರ್.ಪೇಟೆ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು.

ವರದಿ: ಎಸ್ ರವಿ ಹೊನ್ನೇನಹಳ್ಳಿ

## ಮಕ್ಕಳ ಸಮಗ್ರ ಶೈಕ್ಷಣಿಕ ಅಭಿವೃದ್ಧಿಯ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ: ಎಂ.ವಿವೇಕಾನಂದ

**ಬಾಗಲಕೋಟೆ :** ಪ್ರಾಥಮಿಕ ಹಾಗೂ ಪ್ರೌಢ ಶೈಕ್ಷಣಿಕಅವದಿಯೇಮಕ್ಕಳಿಗೆಬದ್ರಬುನಾದಿ ಇದ್ದಂತೆ, ಮಕ್ಕಳಿಗೆ ಪಠ್ಯದ ಜೊತೆಗೆ ಜೀವನ ಪಾಠವನ್ನು ಕಲಿಸುವ ಮೂಲಕ ಮಕ್ಕಳ ಸಮಗ್ರ ಅಭಿವೃದ್ಧಿಯ ದೊಡ್ಡ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಎಂ.ವಿವೇಕಾನಂದ ಹೇಳಿದರು.

ಅವರು, ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ ಬಾಗಲಕೋಟೆ, ಡಾ.ಎಚ್.ಎಫ್. ಕಟ್ಟೀಮನಿ ಪ್ರೌಡ ಶೀಕ್ಷಣ ಪ್ರತಿಷ್ಠಾನ ಅಪರ ಆಯುಕ್ತರ ಕಛೇರಿ,ಶಾಲಾ ಶಿಕ್ಷಣ ಇಲಾಖೆ ದಾರವಾಡ ಹಾಗೂ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಸಂಯುಕ್ತ ಆಶ್ರಯಲ್ಲಿ ಮಂಗಳವಾರ ಬಿ.ವಿ.ವಿ.ಸಂಘ ಮಿನಿ ಸಭಾಭವನದಲ್ಲಿ ನಡೆದ ಶಿಕ್ಷಕ ಪರಿಶ್ರಮ ಹಿರಿಮೆಗೆ ಮನ್ನಣೆ ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಪ್ರಶಸ್ತಿ ಪ್ರಧಾನ ಮಾಡಿ ಮಾತನಾಡಿದರು.



ಅವರು ಜಿಲ್ಲೆಯಲ್ಲಿ ಶೈಕ್ಷಣಿಗೆ ಬೆಳವಣಿಗೆ ಉತ್ತಮವಾಗಿದ್ದು, ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಶಿಕ್ಷಕರು ಮುಂದಿದ್ದಾರೆ, ಮಕ್ಕಳಿಗೆ ಪ್ರಾಥಮಿಕ ಹಾಗೂ ಪ್ರೌಢ ಶೈಕ್ಷಣಿಕ ಅವಧಿಯು ಬದ್ರಬುನಾದಿ ಇದ್ದಂತೆ, ಈ ಸಮಯದಲ್ಲಿ ಶಿಕ್ಷಕರು ತುಂಬಾ ಜವಾಬ್ದಾ–ರಿಯಿಂದ ತಮ್ಮ ಮಕ್ಕಳಂತೆ ವಿದ್ಯಾರ್ಥಿಗಳಿಗೆ ಪಠ್ಯದಪಾಠದಜೋತಗೆಜೀವನಪಾಠವನ್ನು ಕಲಿಸುವ ಅತಿ ದೊಡ್ಡ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ, ಡಾ.ಎಚ್.ಎಫ್ ಕಟ್ಟಿಮನಿ ಪ್ರೌಡ ಶಿಕ್ಷಣ ಪ್ರತಿಷ್ಠಾನ ಶಿಕ್ಷಣ ಪರಿಶ್ರಮ ಹಿರಿಮೆಗೆ ಪ್ರಶಸ್ತಿ ನೀಡಿ ಶಿಕ್ಷಕರಿಗೆ ಅಭಿನಂದಿಸುತ್ತಿರುವ ಕಾರ್ಯ ಶ್ಲಾಘನೀಯ ಇದರಿಂದ ಎಲ್ಲ ಶಿಕ್ಷಕರಿಗೆ ಪ್ರೇರಣೆಯಾಗಲಿ ಎಂದರು.

ಕಾರ್ಯಕ್ರಮವನ್ನು ಸಸಿಗೆ ನಿರುಣಿಸುವ ಮೂಲಕ ಉದ್ಘಾಟಿಸಿದ ಬಿ.ವಿ.ವಿ.ಸಂಘದ ಶಾಲಾ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷರಾದ ಮಹಾಂತೇಶ ಶೆಟ್ಟರ ಅವರು ಮಾತನಾಡಿ ಡಾ.ಎಚ್.ಎಫ್.ಕಟ್ಟಿಮನಿ ಪ್ರೌಡ ಶಿಕ್ಷಣ ಪ್ರತಿಷ್ಠಾನ ಪಾರದರ್ಶಕವಾಗಿ ಕಾರ್ಯ ನಿರ್ವಹಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ, ಇಂದು ವಿದ್ಯಾರ್ಥಿಗಳು ಪ್ರಾಥಮಿಕ ಹಾಗೂ ಪ್ರೌಡಶಾಲೆಯ ಶಿಕ್ಷಕರನ್ನು ಹೆಚ್ಚಾಗಿ ನೆನಪಿನಲ್ಲಿಟ್ಟುಕೊಳ್ಳುತ್ತಾರೆ ಅಲ್ಲಿ ಕಲಿತ ಶಿಕ್ಷಣ ಅವರ ಜೀವನದಲ್ಲಿ ಮಾದರಿಯಾಗಿ ಪರಿಣಾಮ ಬೀರಲಿದೆ, ಈ ಅವದಿಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳ ಜೀವನ ರೂಪಿಸಲು ಬಹಳಷ್ಟು ಶ್ರಮಪಡಬೇಕಿದೆ ಎಂದರು.

ದಾರವಾಡದವಿಶ್ರಾಂತಸಹನಿರ್ದೇಶಕರಾದ ಶಿವಶಂಕರ ಹಿರೇಮಠ ಮಾತನಾಡಿ ಶೈಕ್ಷಣಿಕ ಕ್ಷೇತ್ರದಲ್ಲಿ ತಮ್ಮ ಪರಿಶ್ರಮದಿಂದ ಉತ್ತಮ ಸಾಧನೆ ಮಾಡಿದ ಗುಣಮಟ್ಟದ ಪಾಠಮಾಡುವಂತ ಶಿಕ್ಷಕರನ್ನು ಗುರುತಿಸಿ ಡಾ. ಎಚ್.ಎಫ್.ಕಟ್ಟಿಮನಿ ಪ್ರತಿಷ್ಠಾನ ಪ್ರಶಸ್ತಿ ನೀಡಿ ಗೌರವಿಸುತ್ತಿದೆ, ಭಾರತ ಅಭಿವೃದ್ಧಿ ಹೊಂದಲು ಎಲ್ಲ ಕ್ಷೇತ್ರದ ಹಾಗೂ ಎಲ್ಲರ ಪರಿಶ್ರಮ ಮುಖ್ಯವಾಗಿದೆ, ವಿದ್ಯಾರ್ಥಿಗಳಲ್ಲಿ ಹಾಗು ಯುವ ಸಮೂಹಕ್ಕೆ ಪರಿಶ್ರಮ ಪಡುವ ಮನೋಭೂಮಿಕೆಯನ್ನು ಇಂದು ಮೂಡಿಸಬೇಕಾಗಿದೆ ಎಂದರು.

ಮಕ್ಕಳಲ್ಲಿ ಪುಸ್ತಕ ಓದುವ ಅಭಿರುಚಿ ಹೆಚ್ಚಿಸುವ ಕುರಿತು ಉಪನ್ಯಾಸ ನೀಡಿ ಮಾತನಾಡಿದ ಶಾಲಾ ಶಿಕ್ಷಣ ಇಲಾಖೆಯ ವಿಶ್ರಾಂತ ನಿರ್ದೇಶಕ ಎಸ್.ಆರ್.ಮನಹಳ್ಳಿ ಆದುನಿಕ ತಂತ್ರಜ್ಞಾನದ ಯುಗದಲ್ಲಿ ನಮ್ಮ ಶಾಲಾ ಕೋಠಡಿಗಳು, ಅಲ್ಲಿ ನೀಡುವ ಶಿಕ್ಷಣದ ಗುಣಮಟ್ಟ ಹೆಚ್ಚಾಗಬೇಕು, ಶಿಕ್ಷಣ ಕ್ಷೇತ್ರವನ್ನು ಇನ್ನಷ್ಟು ಉಜ್ವಲಗೊಳಿಸುವ ಕರ್ತವ್ಯ ಶಿಕ್ಷಕರ ಮೇಲಿದೆ ಎಂದರು.

ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ(ಅಭಿವೃದ್ಧಿ) ಬಿ.ಕೆ.ನಂದನೂರ, ಬಿ.ವಿ.ವಿ.ಸಂಘದ ಆಡಳಿತಾಧಿಕಾರಿ ಡಾ.ವಿಜಯಕುಮಾರ ಕಟಗಿಹಳ್ಳಿಮಠ, ಎಸ್.ಎಸ್.ಎಲ್.ಸಿ ಜಿಲ್ಲಾ ನೋಡಲ್ ಅಧಿಕಾರಿ ಎಸ್.ಎಸ್.ಹಾಲವರ ಹಾಗೂ ಕಟ್ಟೀಮನಿ ಪ್ರತಿಷ್ಠಾನದ ಗೌರವ ನಿರ್ದೇಶಕ ಎಸ್,ಟಿ,ಕೋಡ್ಲಿ ವೇದಿಕೆ ಮೇಲೆ ಇದ್ದರು. ಇದೇ ಸಂದರ್ಭದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದ ಶಿಕ್ಷಕ–ರಿಗೆ ಶಿಕ್ಷಣ ಪರಿಶ್ರಮ ಹಿರಿಮೆಗೆ ಮನ್ನಣೆ ಪಡೆದ ದತ್ತಿ ದಾನಿಗಳ ಹೆಸರಿನಲ್ಲಿ ಜಿಲ್ಲಾ ಹಾಗೂ ತಾಲೂಕ ಮಟ್ಟದ ಶಿಕ್ಷಣ ಪರಿಶ್ರಮ ಪುರಸ್ಕಾರ ನೀಡಿ ಗೌರವಿಸಲಾಯಿತು.



ನಾಲತವಾಡ: ಸ್ಥಳಿಯ ಬಸವೇಶ್ವರ ಪ್ರೌಢ ಶಾಲೆಯ ವಿದ್ಯಾರ್ಥಿಗಳು ಇತ್ತಿಚೆಗೆ ವಿಜಯಪೂರದಲ್ಲಿ ನಡೆದ ಜಿಲ್ಲಾ ಮಟ್ಟದ ಬಾಲಕರ ಖೋ ಖೋ ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನ ಪಡೆದಿದ್ದರು, ವಿದ್ಯಾರ್ಥಿಗಳಿಗೆ ಶಾಸಕರಾದ ಸಿ.ಎಸ್.ನಾಡಗೌಡ ಅಪ್ಪಾಜಿ ಅವರು ಸನ್ಮಾನಿಸಿದರು. ಈ ವೇಳೆ ಪ.ಪಂ ಸದಸ್ಯರಾದ ಪೃಥ್ವಿರಾಜ ನಾಡಗೌಡ, ಶಾಲೆಯ ಮುಖ್ಯೋಧ್ಯಾಪಾಯ ಎ.ಎ.ಅಡ್ಡೋಡಗಿ, ದೈಹಿಕ ಶಿಕ್ಷಕರು ಎಲ್.ಎಮ್.ಜೋಗಿ, ಸಹ ಶಿಕ್ಷಕರಾದ ಎಮ್.ಬಿ.ಧನಗೊಂಡ, ಬಿ.ಕೆ.ರುದ್ರಗಂಟಿ, ಎಮ್.ಎಚ್.ಕುಳಗೇರಿ, ಎನ್.ಎಸ್.ಹಿರೇಮಠ ಇನ್ನಿತರರು ಇದ್ದರು.

# ಇಂದಿರಾಗಾಂಧಿ ಜನ್ಮ ದಿನ

## ಪೌರ ಕಾರ್ಮಿಕರಿಗೆ,ರೋಗಿಗಳಿಗೆ ಹಣ್ಣು ವಿತರಣೆ



**ಮೂಡಲಗಿ :** ಕಮಲಾ ನೆಹರೂ ಸ್ಮರಣಾರ್ಥ ಆಸ್ಪತ್ರೆ, ಗಾಂಧಿ ಸ್ಮಾರಕ್ ನಿಧಿ ಮತ್ತು ಕಸ್ತೂರ ಬಾ ಮೆಮೊರಿಯಲ್ ಟ್ರಸ್ಟ್ ಹೀಗೆ ಹಲವಾರು ಸಂಸ್ಥೆಗಳ ಜತೆ ಶ್ರೀಮತಿ. ಇಂದಿರಾ ಗಾಂಧಿ ನಿಕಟ ಸಂಪರ್ಕ ಹೊಂದಿದ್ದರು. ಅವರು ಸ್ವರಾಜ್ ಭವನ ಟ್ರಸ್ಟ್ನ ಅಧ್ಯಕ್ಷೆಯಾಗಿದ್ದರು. ಬಾಲ ಸಹಯೋಗ್ , ಬಾಲ ಭವನ ಮಂಡಳಿ ಮತ್ತು ಮಕ್ಕಳ ರಾಷ್ಟ್ರೀಯ ಸಂಗ್ರಹಾಲಯಗಳ ಜತೆಯೂ ಉತ್ತಮ ಸಂಬಂಧ ಹೊಂದಿದ್ದರು ಎಂದು ಕಾಂಗ್ರೆಸ್ ಮುಖಂಡ ಇಜಾಜ್ ಅಹ್ಮದ್ ಕೊಟ್ಟಲಗಿ ಹೇಳಿದರು

ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಇಂದಿರಾಗಾಂಧಿಯವರ ಜನ್ಮದಿನದ ಪ್ರಯುಕ್ತ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಮಾತನಾಡಿದರು, ಕಾಂಗ್ರೆಸ್ ಮಹಿಳಾ ಘಟಕದ ಕಾರ್ಯಾಧ್ಯಕ್ಷೇ ಸುಜಾತಾ ಹಿರೇಮಠ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿ, ಇಂದಿರಾಗಾಂಧಿಯವರು ದೇಶ ಕಂಡ ಅಪ್ರತಿಮ ಪ್ರಧಾನಿಯಾಗಿ ಬಡ ಜನರ ನಾಡಿ ಮಿಡಿತ ಚೆನ್ನಾಗಿ ಅರಿತು, ಕ್ಷೀರ ಕ್ರಾಂತಿ, ಹಸಿರುಕ್ರಾಂತಿ, ಭೂ ಒಡೆಯದಂತಹ ಕ್ರಾಂತಿಕಾರಿ ಖಾಯ್ದೆಗಳನ್ನು ಜಾರಿಗೆ ತಂದಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಇಂದಿರಾಗಾಂಧಿಯವರ ಜನ್ಮದಿನದ ಪ್ರಯುಕ್ತ ಆಶಾಕಾರ್ಯಕರ್ತೆಯರಿಗೆ, ಪೌರ ಕಾರ್ಮಿಕರಿಗೆ, ರೋಗಿಗಳಿಗೆ ಹಣ್ಣು ಹಾಗೂ ಪತ್ರಿಕಾ ವಿತರಕರಿಗೆ ಪೆನ್, ನೋಟ್ ಬುಕ್ ವಿತರಿಸಲಾಯಿತು.

ಈ ಸಂದರ್ಭದಲ್ಲಿ ವೈದ್ಯಾಧಿಕಾರಿ ಡಾ.ಭಾರತಿ ಕೋಣಿ, ಕಾಂಗ್ರೆಸ್ ಅರಭಾವಿ ಮಂಡಲದ ಅಧ್ಯಕ್ಷ ಸುರೇಶ್ ಮಗದುಮ್, ರಫೀಕ್ ಪೈಲ್ವಾನ್, ವಾಯ್.ಎಮ್.ಉದ್ದಪ್ಪನವರ್, ಲಲಿತಾ ಜಾಧವ, ಕೌಸರ್ ತಹಶೀಲ್ದಾರ್, ದಿಲ್ ಶಾದ ಹವಾಲ್ದಾರ್, ರೇಶ್ಮಾ ಕಡಬಿಶಿವಾಪೂರ್, ಶ್ರೀಧರ್ ಹಿರೇಮಠ್, ದಾವಲ್ ಡಾಂಗೆ, ಸೋಹೆಲ್ ಮುಲ್ಲಾ ಸೇರಿದಂತೆ ಅನೇಕ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಆಸ್ಪತ್ರೆ ಸಿಬ್ಬಂದಿ ಉಪಸ್ಥಿತರಿದ್ದರು.

# ದೇವರ ಒಲುಮೆಗೆ ಪಾತ್ರರಾಗಲು ಕನಕದಾಸರ ಜೀವನವೇ ಸ್ಫೂರ್ತಿ: ಕೆ. ಬಿ. ಕುಂಬಾಳಿ

**ಮಹಾಲಿಂಗಪುರ :** ಸಮಾಜದ ಹಿರಿಯ ಶಿಕ್ಷಕರಾದ ಕೆ.ಬಿ.ಕುಂಬಾಳಿ ಅವರು ದೇವರ ಒಲುಮೆಗೆ ಪಾತ್ರರಾಗಲು ಕನಕದಾಸರ ಜೀವನವೇ ಸ್ಫೂರ್ತಿ ನೀಡುತ್ತದೆ ಎಂದು ಹಿರಿಯ ಶಿಕ್ಷಕ ಕೆ.ಬಿ.ಕುಂಬಾಳಿ ಹೇಳಿದರು.

ಸಮೀಪದರನ್ನಬೆಳಗಲಿಪಟ್ಟಣದಪುರಾತನ ಕಾಲದ ಅಮೃತೇಶ್ವರ ದೇವಸ್ಥಾನದ ಆವರಣದಲ್ಲಿ ಕನಕದಾಸ ಸೇವಾ ಸಮಿತಿ ರನ್ನಬೆಳಗಲಿ ಆಶ್ರಯದಲ್ಲಿ ಜರುಗಿದ 537ನೇ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಕನಕದಾಸರು ಸಮಾಜದ ಓರೆ ಕೋರೆಗಳನ್ನು ಒಬ್ಬ ಚಿಕಿತ್ಸಕನಾಗಿ ನೇರವಾಗಿ ತನ್ನ ಕೀರ್ತನೆಗಳ ಮೂಲಕ ತಿದ್ದಿ, ಪ್ರಯತ್ನಿಸಿದ ಬಂಡಾಯ ಕವಿಗಳಾಗಿ ಹೊರಹೊಮ್ಮಿದ್ದಾರೆ. ಹಾಲುಮತ ಸಮಾಜದ ಐತಿಹಾಸಿಕ ನೇತಾರರು ನಾಡು, ರಾಷ್ಟಕ್ಕಾಗಿ ತಮ್ಮನ್ನೇ ಸಮರ್ಪಿಸಿ ಕೊಂಡಿದ್ದಾರೆ ಎಂದರು.

ದಿವ್ಯಸಾನಿಧ್ಯ ಯೋಗಿ ರಾಜೇಂದ್ರ ಸದಾಶಿವ ಗುರೂಜಿ ಮಾತನಾಡಿ ಸಮಾಜದ ಅಭಿವೃದ್ಧಿಗೆ ಶಿಕ್ಷಣವೇ ಮೂಲ ತಳ ಪಾಯವಾಗಬೇಕು. ಶಿಕ್ಷಣದಿಂದ ಮಾತ್ರ ಸಮಾಜ ಅಭಿವೃದ್ಧಿ ಹೊಂದಲು ಸಾಧ್ಯ. ಕನಕದಾಸರು ಸಮಾಜಕ್ಕೆ ಅಂಟಿಕೊಳ್ಳದೆ ನಾಡು ಮತ್ತು ರಾಷ್ಟಕ್ಕೆ ವ್ಯಾಪಿಸಿದ ದಿವ್ಯ ಚೇತನಾ ಶಕ್ತಿಯೇ ಕನಕದಾಸರು ಎಂದರು.

ಶ್ರೀರಾಮ್ ಸೇನಾ ರಾಜ್ಯ ಉಪಾಧ್ಯಕ್ಷ ಮಹಾಲಿಂಗಪ್ಪ ಗುಂಜಿಗಾಂವಿ ಕುಲ ಕುಲ ಎಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆ ಏನಾದರೂ ಬಲ್ಲಿರಾ? ಎಂದು ಪ್ರಶ್ನಿಸಿದ ಕನಕದಾಸರು ಒಗ್ಗಟ್ಟಿನ ಮಹತ್ವವನ್ನು ಸಾರಿದ್ದಾರೆ. ಇಂದು ಹಿಂದೂಗಳು ಜಾತಿ ಸಮಾಜಗಳೆಂದು ಚಿದ್ರ ಚಿದ್ರವಾಗುತ್ತಿದ್ದಾರೆ. ಅಲ್ಪಸಂಖ್ಯಾತರು ಅಟ್ಟಹಾಸದಿಂದ ಹಿಂದುಗಳ ಶ್ರದ್ಧಾ ಕೇಂದ್ರಗಳನ್ನು ತೆರುವುಗೊಳ್ಳಿಸುತ್ತಾ ತಮ್ಮ ಕುರುಹುಗಳನ್ನು ಸ್ಥಾಪಿಸುತ್ತಾ, ಇಂದು ಮೋಸದ ಜಾಲದಿಂದ ರೈತರ ಜಮೀನುಗಳನ್ನು ಕೂಡ ಕಬಳಿಸುತ್ತಿದ್ದಾರೆ.

ಇಷ್ಟಾದರೂ ಹಿಂದೂಗಳು ಒಗ್ಗಟ್ಟಾಗಿ ಹೋರಾಡದಿದ್ದರೆ ನಮ್ಮನ್ನೇ ನಾವು ಕಳೆದುಕೊಳ್ಳುವ ಕಾಲ ಬರುತ್ತದೆ ಎಂದು ಎಚ್ಚರಿಸಿದರು.

ಜೋತಿಷ್ಯ ರತ್ನ ಡಾ.ರಮೇಶಕುಮಾರ ರಾವಳ ಗುರೂಜಿ ಸಾನಿಧ್ಯ, ಲಕ್ಕಪ್ಪ ಮೇಡ್ಯಾಗೋಳ ಅಧ್ಯಕ್ಷತೆವಹಿಸಿದ್ದರು.

ವಿವಿಧ ಕ್ಷೇತ್ರದ ಸಾಧಕರಾದ ಜಾನಪದ ಕಲಾ ರತ್ನ ಪ್ರಶಸ್ತಿ ಪಡೆದ ಕೃಷ್ಣಪ್ಪ ಕೆಂಚಪ್ಪ ಹಾರೂಗೇರಿ, ಬದಾಮಿ ಕನ್ನಡ ಉತ್ಸವದಲ್ಲಿ ಕೌಜಲಗಿ ನಿಂಗಮ್ಮ ಪ್ರಶಸ್ತಿ ಪಡೆದ ವೆಂಕಪ್ಪ ಹನಮಂತ ಕ್ವಾನ್ಯಾಗೋಳ, ಪಿ.ಕೆ.ಪಿ.ಎಸ್ ಅಧ್ಯಕ್ಷ ಚಿನ್ನಪ್ಪ ಮಲ್ಲಪ್ಪ ಪೂಜೇರಿ, ಪಪಂ.ಸದಸ್ಯರಾದ ನೀಲಕಂಠ ಸೈದಾಪುರ, ಕರೆಪ್ಪ ಕುಂಬಾಳಿ, ರಾಷ್ಟ ಮಟ್ಟದ ಚಿತ್ರ ಕಲೋತ್ಸವದಲ್ಲಿ ಪ್ರಥಮ ಸ್ಥಾನ ಪಡೆದ ಕಾವೇರಿ ಶಿವಪ್ಪ ಹಂಚಿನಾಳ, 2023-24ನೇ ಸಾಲಿನಲ್ಲಿ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆಗೈದ ರೂಪಾ ಲಕ್ಕಪ್ಪ ಸೈದಾಪುರ,

ಲಕ್ಷ್ಮೀ ಕಲ್ಲಪ್ಪ ಪೂಜೇರಿ, ಕೆಂಚಪ್ಪ ಲಕ್ಷ್ಮಣ ಮನ್ನಪ್ಪಗೋಳ, ಮಾದೇಶ ಮುತ್ತಪ್ಪ ಹಳ್ಳೂರ, ಕುಮಾರ ಕೃಷ್ಣಪ್ಪ ಹಾರೂಗೇರಿ ಮತ್ತು ದ್ವಿತೀಯ ಪಿಯುಸಿ ಪ್ರಸ್ತುತ ವರ್ಷದಲ್ಲಿ ಉತ್ತಮ ಸಾಧನೆಗೈದ ಗೌರಿ ಪೂಜೇರಿ, ಪ್ರತಿಭಾ ಕುಂಬಾಳಿ, ಅಕ್ಷತಾ ಧರ್ಮಟ್ಟಿ, ಪಲ್ಲವಿ ಕುಂಬಾಳಿ, ಮಾಳಪ್ಪ ಹವಾಲ್ದಾರ,ಶ್ರೀಶೈಲ ಮನ್ನಪ್ಪಗೋಳ,ಭಾಗ್ಯ ಪೂಜಾರಿ ಸೇರಿದಂತೆ ಹಲವು ಸಾಧಕರನ್ನು ಸನ್ಮಾನಿಸಲಾಯಿತು.

ರಾಮಪ್ಪ ಪೂಜೇರಿ, ಮಹಾದೇವಪ್ಪ ಕುಂಬಾಳಿ, ಲಕ್ಷ್ಮಣ ಕ್ವಾನ್ಯಾಗೊಳ, ಭೀಮಪ್ಪ ಮನ್ನಿಕೇರಿ, ಕೆಂಚಪ್ಪ ಕಂಬಳಿ, ಸಿದ್ದುಗೌಡ ಪಾಟೀಲ, ಪ್ರವೀಣ ಪಾಟೀಲ, ಸಂಗಪ್ಪ ಅಮಾತಿ, ಮುಬಾರಕ ಅತ್ತಾರ, ನೀಲಕಂಠ ಸೈದಾಪುರ, ಮುತ್ತಪ್ಪ ಸಣ್ಣಟ್ಟಿ, ಶಿವನಗೌಡ ಪಾಟೀಲ, ಬಸಪ್ಪ ಬಡಿಗೇರ, ಶಿವಯ್ಯ ಮೆಟಗುಡ್ಡ, ಈಶ್ವರ ಅಮಾತಿ, ಈರಪ್ಪ ಕಿತ್ತೂರ, ಗಿರೀಶ ಶಿರೋಳ ಹಾಗೂ ಹಾಲುಮತ ಸಮಾಜದ ಹಿರಿಯರು, ತಾಯಂದಿರು ಇದ್ದರು.




# ಪರಿಹಾರ ಧನ ಚೆಕ್ ವಿತರಣೆ



**ಮಹಾಲಿಂಗಪುರ :** ಯಕ್ಸಂಬಾದ ಬೀರೇಶ್ವರ ಕೋ ಅಪ್ ಕ್ರೇಡಿಟ್ ಸೊಸೈಟಿ ಸ್ಥಳಿಯ ಶಾಖೆಯ ಸಾಲಗಾರ ಅಮೀನಾ ಶರೀಪ್ಸಾಬ ಹುನ್ನೂರ ನಿಧನರಾದ ಹಿನ್ನಲೆ ಅವರ ವಾರಸುದಾರ ಶರೀಫಸಾಬ ಕಾಶೀಮಸಾಬ ಹುನ್ನೂರ ಅವರಿಗೆ ಸದಸ್ಯರ ಕಲ್ಯಾಣ ನಿಧಿಯಿಂದ 30 ಸಾವಿರ ರೂ ಪರಿಹಾರ ಧನ ಚೆಕ್ ವಿತರಿಸಲಾಯಿತು. ಶಾಖಾ ಮುಖ್ಯಕಾರ್ಯನಿರ್ವಾಹಕ ಬಸವರಾಜ ಬೇಟಗೇರಿ, ಸಲಹಾ ಸಮಿತಿ ಸದಸ್ಯರಾದ ರವಿರಾಜ ಘಟ್ನಟ್ಟಿ, ಶ್ರೀಶೈಲ ಕಿರಗಟಗಿ ಇದ್ದರು.

# ಶ್ರದ್ಧಾ ಕೇಂದ್ರವಾಗಿ ಬಸವ ಯೋಗ ಮಂಟಪ ಇಂದು ಅತ್ಯುತ್ತಮವಾಗಿ ಬೆಳೆಯುತ್ತಿದೆ

**ಮೂಡಲಗಿ :** ದಿವಂಗತ ಸಂಗಣ್ಣನಬಸವ ಸ್ವಾಮೀಜಿಗಳ ಸತತ ಪ್ರಯತ್ನದ ಫಲವಾಗಿ ಬಳೋಬಾಳ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರ ಶ್ರದ್ಧಾ ಕೇಂದ್ರವಾಗಿ ಬಸವ ಯೋಗ ಮಂಟಪ ಇಂದು ಅತ್ಯುತ್ತಮವಾಗಿ ಬೆಳೆಯುತ್ತಿದೆ. ಇದು ಬರುವ ದಿನಗಳಲ್ಲಿ ಬಸವ ತತ್ವ ಅನುಷ್ಠಾನದ ಮಹಾನ ಕೇಂದ್ರವಾಗಿ ಬೆಳೆಯಲಿ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಶುಭ ಹಾರೈಸಿದರು.

ಮಂಗಳವಾರ ಅರಭಾವಿ ಮತಕ್ಷೇತ್ರದ ಬಳೋಬಾಳ ಗ್ರಾಮದ ಬಸವ ಯೋಗ ಮಂಟಪದ ಹತ್ತಿರ ರಾಜ್ಯಸಭಾ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ನಿರ್ಮಾಣಗೊಂಡ ಸಮುದಾಯ ಭವನದ ಉದ್ಘಾಟನೆ ನೇರವೇರಿಸಿ ಮಾತನಾಡಿದರು.



ಮಠ ಮಂದಿರಗಳು ಜನರ ಧಾರ್ಮಿಕತೆಯ ಶ್ರದ್ಧಾ ಕೇಂದ್ರಗಳು ಜೊತೆಗೆ ನಮ್ಮ ಸನಾತನ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಮಹತ್ವದ ಕಾರ್ಯವನ್ನು ಮಾಡುತ್ತಿವೆ.

ಹೀಗಾಗಿ ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಬಸವ ಯೋಗ ಮಂಟಪದಂತಹ ಕೇಂದ್ರಗಳನ್ನು ಉಳಿಸಿ ಬೆಳೆಸುವಲ್ಲಿ ವಿಶೇಷ ಕಾಳಜಿ ವಹಿಸಬೇಕೆಂದು ವಿನಂತಿಸಿದರು.

ಸದ್ಗುರು ಮಾತಾ ನೀಲಾಂಬಿಕಾದೇವಿ, ಸದ್ಗುರು ಮಾತಾ ನೀಲಲೋಚನ ತಾಯಿ ಸಾನಿಧ್ಯ ವಹಿಸಿದ್ದರು.

ಪ್ರಮುಖರಾದ ಭಗವಂತ ಪಾಟೀಲ, ಸುನೀಲ ಈರೇಶನವರ, ಅಶೋಕ ಚಿಮ್ಮಡ, ಯಲ್ಲಪ್ಪ ಪಾಟೀಲ, ಗುರುಸಿದ್ದ ಮುರಾರಿ, ರಾಮಲಿಂಗ ಬೆಳವಿ, ಲಕ್ಕಪ್ಪ ಕಳಸನ್ನವರ, ನಿರುಪಾದ ರೆಡ್ಡಿ, ವಿಠ್ಠಲ ಸುಣಧೋಳಿ, ರೂಪೇಶ ಮಾಲದಿನ್ನಿ, ಗುರುಸಿದ್ದ ಮಲ್ಲಾಪೂರ, ಗುರುಸಿದ್ದ ದುರ್ಗಿ, ಮಾರುತಿ ಕಾಡಗಿ, ರಾಮಗೊಂಡ ಪಾಟೀಲ, ಶಿವಪುತ್ರ ಚಿಮ್ಮಡ, ಅಡಿವೆಪ್ಪ ಕುರಬೇಟ ಸೇರಿದಂತೆ ಸ್ಥಳೀಯ ಮುಖಂಡರ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆ

# ಗ್ಯಾರಂಟಿ ಯೋಜನೆಗಳ ಮಾಹಿತಿ ಸಾರ್ವಜನಿಕರಿಗೆ ತಲುಪಿಸಿ: ರೆಡ್ಡಿ ಶ್ರೀನಿವಾಸ

**ಕೊಪ್ಪಳ :** ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳ ಹೆಚ್ಚು ಪ್ರಚಾರ ನೀಡುವುದರ ಮೂಲಕ ಸಾರ್ವಜನಿಕರಿಗೆ ಈ ಯೋಜನೆಗಳ ಮಾಹಿತಿ ತಲುಪಿಸುವ ಕೆಲಸವನ್ನು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಮಾಡಬೇಕೆಂದು ಕೊಪ್ಪಳ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ ಹೇಳಿದರು.

ಅವರು ಬುಧವಾರ ಕೊಪ್ಪಳ ಜಿಲ್ಲಾ ಪಂಚಾಯತ್ ಜೆ.ಎಚ್ ಪಟೇಲ್ ಸಭಾಂಗಣದಲ್ಲಿ ನಡೆದ ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳ ಜಿಲ್ಲಾ ಮಟ್ಟದ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಜನ ಸಾಮಾನ್ಯರ ಏಳ್ಗೆಗಾಗಿ ರಾಜ್ಯ ಸರ್ಕಾರವು ಶಕ್ತಿ ಯೋಜನೆ, ಗೃಹಲಕ್ಷ್ಮಿ, ಅನ್ನಭಾಗ್ಯ, ಗೃಹಜ್ಯೋತಿ ಹಾಗೂ ಯುವನಿದಿ, ಈ ಮಹತ್ತರವಾದ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದೆ. ಜನಪರವಾದ ಈ ಕಾರ್ಯಕ್ರಮಗಳನ್ನು ಕೊಪ್ಪಳ ಜಿಲ್ಲೆಯಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳಿಸಿ ಇವುಗಳ ಲಾಭವನ್ನು ಜಿಲ್ಲೆಯ ಪ್ರತಿಯೊಬ್ಬ ಅರ್ಹ ಫಲಾನುಭವಿಗಳಿಗೆ ಸಿಗಬೇಕು. ಯಾವುದೇ ಅರ್ಹ ಫಲಾನುಭವಿಗಳು ಈ ಯೋಜನೆಗಳಿಂದ ಹೊರಗುಳಿಯದಂತೆ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದರು.

ಪ್ರತಿ ತಿಂಗಳು ನಡೆಯುವ ತಾಲ್ಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯಸಭೆಯನಡುವಳಿಗಳನ್ನುಆಯಾ ತಿಂಗಳ 15ನೇ ತಾರೀಖಿನೊಳಗೆ ಜಿಲ್ಲಾ ಸಮಿತಿಗೆ ಸಲ್ಲಿಸಿಬೇಕು. ಇದರಿಂದ ಜಿಲ್ಲಾ ಮಟ್ಟದಲ್ಲಿ ಚರ್ಚೆ ಮಾಡಲು ಅವಶ್ಯಕವಿರುವ ವಿಷಯಗಳ ಕುರಿತು ಸಭೆಯಲ್ಲಿ ಚರ್ಚಿಸಲು ಅನುಕೂಲವಾಗುತ್ತದೆ ಎಂದು ತಾಲೂಕ ಮಟ್ಟದ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರುಗಳಿಗೆ ತಿಳಿಸಿದರು.



ಗೃಹಲಕ್ಷ್ಮಿ ಯೋಜನೆಯಡಿ ಬಾಕಿ ಇರುವ ಅರ್ಜಿಗಳ ವಿಲೇವಾರಿ ಮಾಡಲು ಆಯಾ ತಾಲೂಕಿನ ಸಿ.ಡಿ.ಪಿ.ಓಗಳು ಕ್ರಮ ವಹಿಸಬೇಕು. ಬಸ್ ವ್ಯವಸ್ಥೆಗಳ ಸರಿಯಾಗಿ ನಿರ್ವಹಣೆಗೆ ಸೂಕ್ತ ಕ್ರಮ ವಹಿಸಬೇಕೆಂದು ಸಂಬಂಧಿಸಿದ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿರುವ ಅರ್ಹ ಫಲಾನುಭವಿಗಳಿಗೆ ಬಿಪಿಎಲ್ ಕಾರ್ಡ್ ವಿತರಣೆಗೆ ಕ್ರಮ ಕೈಗೊಳ್ಳಿ. ನ್ಯಾಯಬೆಲೆ ಅಂಗಡಿಗಳನ್ನು ಸರಿಯಾದ ಸಮಯಕ್ಕೆ ತೆರೆದು ಜನರಿಗೆ ಆಹಾರ ಧಾನ್ಯಗಳನ್ನು ಸರಿಯಾದ ಪ್ರಮಾಣದಲ್ಲಿ ವಿತರಿಸಬೇಕು. ಸಾರ್ವಜನಿಕರೊಂದಿಗೆ ಉತ್ತಮ ರೀತಿಯಲ್ಲಿ ವ್ಯವಹರಿಸುವಂತೆ ಎಲ್ಲಾನ್ಯಾಯಾಬೆಲೆಅಂಡಿಗಳಮಾಲೀಕರಿಗೆ ನಿರ್ದೇಶನನೀಡಬೇಕುಮತ್ತುನ್ಯಾಯಾಬೆಲೆ ಅಂಗಡಿಗಳಲ್ಲಿ ಸಿಸಿ ಟಿವಿ ಅಳವಡಿಸಲು ಕ್ರಮ ವಹಿಸಿ.

ಗೃಹಲಕ್ಷ್ಮಿ: ಈ ಯೋಜನೆಯಡಿ ಕೊಪ್ಪಳ ಜಿಲ್ಲೆಯಲ್ಲಿ 3,21,494 ಜನ ಮನೆ ಯಜಮಾನಿಯರು ನೋಂದಣಿ ಮಾಡಿಕೊಂಡಿದ್ದು, ಆಗಸ್ಟ್-2023 ರಿಂದ ಆಗಸ್ಟ್-2024 ರವರೆಗೆ ಡಿ.ಬಿ.ಟಿ. ಮೂಲಕ ಒಟ್ಟು 779 ಕೋಟಿ 35 ಲಕ್ಷ 72 ಸಾವಿರ ರೂ.ಗಳನ್ನು ಪಾವತಿಸಲಾಗಿರುತ್ತದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು.

ಗೃಹ ಜ್ಯೋತಿ: ಈ ಯೋಜನೆಯಡಿ ಕೊಪ್ಪಳ ಜಿಲ್ಲೆಯಲ್ಲಿಒಟ್ಟು2,75,487ಫಲಾನುಭವಿಗಳು ನೋಂದಣಿಯಾಗಿರುತ್ತಾರೆ.

ಆಗಸ್ಟ್-2023 ರಿಂದ ಅಕ್ಟೋಬರ್-2024ರ ಅಂತ್ಯಕ್ಕೆ ಸಬ್ಸಿಡಿ ಮೂಲಕ ಒಟ್ಟು 162.3 ಕೋಟಿ ರೂ.ಗಳನ್ನು ಈ ಯೋಜನೆಗೆ ಪಾವತಿಸಲಾಗಿದ್ದು, ಶೇ 97.10ರಷ್ಟು ಪ್ರಗತಿ ಜಿಲ್ಲೆಯಲ್ಲಿ ಸಾಧಿಸಲಾಗಿದೆ ಎಂದು ಜೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರರು ಸಭೆಗೆ ತಿಳಿಸಿದರು.

ಯುವನಿಧಿ: ಯೋಜನೆಯಡಿ ಡಿಸೆಂಬರ್-2023 ರಿಂದ ಇಲ್ಲಿಯವರೆಗೆ 14,265 ಪದವಿಧರರಿಗೆ ತಿಂಗಳಿಗೆ ರೂ. 3,000 ರಂತೆ ಹಾಗೂ 182 ಡಿಪ್ಲೋಮಾ ಅಭ್ಯರ್ಥಿಗಳಿಗೆ ತಿಂಗಳಿಗೆ ರೂ. 1,500 ರಂತೆ ಒಟ್ಟು 14,447 ಫಲಾನುಭವಿಗಳಿಗೆ ಡಿ.ಬಿ.ಟಿ. ಮೂಲಕ ಹಣ ವರ್ಗಾಯಿಸಲಾಗಿದ್ದು, ಇದಕ್ಕಾಗಿ ಒಟ್ಟು ಮೊತ್ತ 4.30 ಕೋಟಿ ರೂ. ಗಳನ್ನು ಪಾವತಿಸಲಾಗಿರುತ್ತದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಅಧಿಕಾರಿಗಳು ತಿಳಿಸಿದರು.

ಅನ್ನಭಾಗ್ಯ: ಯೋಜನೆಯಡಿ ಕೊಪ್ಪಳ ಜಿಲ್ಲೆಯಲ್ಲಿರುವ ಒಟ್ಟು 3,22,209 ಪಡಿತರ ಚೀಟಿಗಳ ಪೈಕಿ ಆಗಸ್ಟ್-2024ರ ಮಾಹೆಗೆ 2,94,969 ಪಡಿತರ ಚೀಟಿಗಳಿಗೆ 17.98 ಕೋಟಿ ರೂ.ಗಳನ್ನು ಪಾವತಿಸಲು ಕ್ರಮವಹಿಸಲಾಗಿದೆ. ಇದರಲ್ಲಿ 2,35,108 ಪಡಿತರ ಚೀಟಿಗಳಿಗೆ ಈಗಾಗಲೇ ಡಿಬಿಟಿ ಮೊತ್ತವನ್ನು ಪಾವತಿಸಲಾಗಿದೆ ಹಾಗೂ ಉಳಿದ 59,861 ಚೀಟಿಗಳಿಗೆ 3.64 ಕೋಟಿ ರೂ. ಪಾವತಿ ಕಾರ್ಯ ಪ್ರಗತಿಯಲ್ಲಿದೆ ಎಂದು ಆಹಾರ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದರು.

ಶಕ್ತಿ ಯೋಜನೆ: ಶಕ್ತಿ ಯೋಜನೆಯಡಿ ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು 5.45 ಕೋಟಿ ಮಹಿಳಾಪ್ರಯಾಣಿಕರುಈಯೋಜನೆಯಡಿ ಜೂನ್-2023 ರಿಂದ ಅಕ್ಟೋಬರ್-2024 ರವರೆಗೆ ಉಚಿತವಾಗಿ ಪ್ರಯಾಣಿಸಿದ್ದಾರೆ ಎಂದು ಕಲ್ಯಾಣ ಕರ್ನಾಟಕದ ರಸ್ತೆ ಸಾರಿಗೆ ನಿಗಮದ ಕೊಪ್ಪಳ ವಿಭಾಗದ ಅಧಿಕಾರಿಗಳು ತಿಳಿಸಿದರು.

ಸಭೆಯಲ್ಲಿ ಕೊಪ್ಪಳ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಎಸ್.ಬಿ ಖಾದ್ರಿ, ಅಮರೇಶಪ್ಪ ಎಸ್.ಜಿ., ನಾಗರಜ ಅರಳಿ ಹಾಗೂ ಖಾಸಿಂ ಸಾಬ್, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ, ಮುಖ್ಯ ಯೋಜನಾ ನಿರ್ದೇಶಕ ಡಿ.ಮಂಜುನಾಥ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ರೇಷ್ಮಾ ಹಾನಗಲ್, ಜಿಲ್ಲಾ ಉದ್ಯೋಗ್ಯ ವಿನಿಮತ ಅಧಿಕಾರಿ ಪ್ರಾಣೇಶ್, ಮಹಿಳಾ ಮತ್ತು ಮಕ್ಕಳು ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಪರುಶುರಾಮ ವೈ.ಎಸ್., ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರು ಹಾಗೂ ತಾಲ್ಲೂಕಾ ಅಧ್ಯಕ್ಷರು ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಐಕ್ಯತಾ ಪ್ರಮಾಣ ವಚನ ಸ್ವೀಕಾರ



**ಕೊಪ್ಪಳ :** ರಾಷ್ಟ್ರೀಯ ಐಕ್ಯತಾ ಸಪ್ತಾಹ ಕಾರ್ಯಕ್ರಮದ ನಿಮಿತ್ತ ಕೊಪ್ಪಳ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ "ರಾಷ್ಟ್ರೀಯ ಐಕ್ಯತಾ ಪ್ರಮಾಣ ವಚನ" ಸ್ವೀಕರಿಸಲಾಯಿತು.

"ರಾಷ್ಟ್ರೀಯ ಐಕ್ಯತಾ ಸಪ್ತಾಹ"ವನ್ನು ಆಚರಿಸುವಂತೆ ಸರ್ಕಾರವು ನಿರ್ಧರಿಸಿದ್ದು, ಅದರಂತೆ ರಾಷ್ಟದ ಸ್ವಾತಂತ್ರ್ಯ ಹಾಗೂ ಐಕ್ಯತೆಯನ್ನು ಬಲಪಡಿಸಲು, ದೇಶದಲ್ಲಿ ಹೆಚ್ಚುತ್ತಿರುವ ಹಿಂಸಾಚಾರ ಮತ್ತು ಕೋಮು ದ್ವೇಷವನ್ನು ತಡೆಗಟ್ಟುವುದಕ್ಕಾಗಿ ಈ ಸಪ್ತಾಹವನ್ನು ಹಮ್ಮಿಕೊಂಡು ರಾಷ್ಟ್ರೀಯ ಐಕ್ಯತಾ ಪ್ರಮಾಣ ವಚನ ಸ್ವೀಕರಿಸುವ ಕುರಿತಾದ ಸರ್ಕಾರದ ನಿರ್ದೇಶನದಂತೆ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರ ನೇತೃತ್ವದಲ್ಲಿ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ ರಾಷ್ಟ್ರೀಯ ಐಕ್ಯತಾ ಪ್ರಮಾಣ ವಚನವನ್ನು ಸ್ವೀಕರಿಸಿದರು.

ಜಿಲ್ಲಾ ತರಬೇತಿ ಸಂಸ್ಥೆಯ ಪ್ರಾಚಾರ್ಯರಾದ ಕೃಷ್ಣಮೂರ್ತಿ ದೇಸಾಯಿ ಅವರು ಎಲ್ಲರಿಗೂ ಪ್ರಮಾಣ ವಚನ ಬೋಧಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ, ಜಂಟಿ ಕೃಷಿ ನಿರ್ದೇಶಕ ರುದ್ರೇಶಪ್ಪ ಟಿ.ಎಸ್., ಪ್ರಾದೇಶಿಕ ಸಾರಿಗೆ ಅಧಿಕಾರಿ ಎಲ್.ಬಿ.ನಾಲವಾರ, ಜಿಲ್ಲಾ ಕಾರ್ಮಿಕ ಅಧಿಕಾರಿ ಸುಧಾ ಗರಗ, ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

# 21ನೇ ರಾಷ್ಟ್ರೀಯ ಜಾನುವಾರು ಗಣತಿ ಸಮೀಕ್ಷೆಗೆ ಚಾಲನೆ

**ಮೂಡಲಗಿ :** ಪ್ರತಿ ಐದು ವರ್ಷಗಳಿಗೊಮ್ಮೆ ಆಧುನಿಕತಂತ್ರಜ್ಞಾನದಮೂಲಕನಿಖರವಾಗಿ ಜಾನುವಾರು ಗಣತಿ ಮಾಡುವುದರಿಂದ ಗ್ರಾಮಗಳಲ್ಲಿರುವ ಜಾನುವಾರುಗಳ ಸಂಖ್ಯೆಯ ನಿಖರ ಮಾಹಿತಿ ಸಿಗಲಿದೆ. ಇದಕ್ಕನುಗುಣವಾಗಿ ಮೇವು ಅಗತ್ಯತೆ ಹಾಗೂ ನೀತಿ ರೂಪಿಸಲು ಈ ಸಮೀಕ್ಷಾ ವರದಿಯು ಪಶುಸಂಗೋಪನೆ ಅಭಿವೃದ್ಧಿ ಮತ್ತು ಆರೋಗ್ಯ, ಉತ್ಪಾದಕತೆ ಹೆಚ್ಚಿಸಲು ಸಹಕಾರಿಯಾಗಲಿದೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಹೇಳಿದರು.

ಮಂಗಳವಾರ ಕಲ್ಲೋಳಿ ಪಟ್ಟಣದ ಸಂಸದರ ಜನಸಂಪರ್ಕ ಕಾರ್ಯಾಲಯದಲ್ಲಿ ಮೂಡಲಗಿ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಆಯೋಜಿಸಿದ 21ನೇ ರಾಷ್ಟ್ರೀಯ ಜಾನುವಾರು ಗಣತಿ ಸಮೀಕ್ಷೆಗೆ ಚಾಲನೆ ನೀಡಿ, ಕರ ಪತ್ರಗಳನ್ನು ಬಿಡುಗಡೆಗೊಳಿಸಿ ಮಾತನಾಡಿದರು.



ಪ್ರತಿ ಐದು ವರ್ಷಕ್ಕೊಮ್ಮೆ ಜಾನುವಾರು ಸಮೀಕ್ಷೆ ನಡೆಸಲಾಗುತ್ತೆ. ಗಣತಿದಾರರು ಮನೆ ಮನೆಗೆ ಭೇಟಿ ನೀಡಿ ಜಾನುವಾರುಗಳ ಲಿಂಗ, ವಯಸ್ಸು, ಆರೋಗ್ಯದ ಸ್ಥಿತಿಗತಿ, ಯಾವ ತಳಿ, ಅದನ್ನು ಸಾಕುತ್ತಿರುವ ರೈತ ಕುಟುಂಬಗಳ ವಿವರಗಳು ಸೇರಿದಂತೆ ಇತ್ಯಾದಿ ಮಾಹಿತಿಯನ್ನು ಮೊಬೈಲ್ ಆಪ್‌ನಲ್ಲೆ ದಾಖಲಿಸಲಿದ್ದಾರೆ. ಜಾನುವಾರು ಸಮೀಕ್ಷೆ ಫೆಬ್ರವರಿ 2025ರ ವರೆಗೆ ನಡೆಯಲಿದೆ ಎಂದರು.

ಜಾನುವಾರು ಸಾಕಣೆದಾರರು ಸಾಕಿರುವ ದನ, ಎತ್ತು, ಎಮ್ಮೆ, ಹಸು, ಮೇಕೆ, ಕುರಿ, ಕೋಳಿ, ನಾಯಿ, ಕುದುರೆ, ಹಂದಿ, ಬಾತುಕೋಳಿಮತ್ತುಎಮುಪಕ್ಷಿಗಳಮಾಹಿತಿ ಪಡೆಯಲಾಗುವುದು. ಬಿಡಾಡಿ ದನಗಳು ಮತ್ತುಬೀದಿನಾಯಿಹಾಗೂಸಾಕುನಾಯಿಗಳ ಮಾಹಿತಿಯನ್ನೂ ಕಲೆ ಹಾಕಲಾಗುತ್ತದೆ. ಜಾನುವಾರು ಹೊಂದಿರುವ ರೈತರಿಗೆ ಈ ಗಣತಿಯಿಂದ ಅನುಕೂಲವಾಗಲಿದೆ. ಇದರಿಂದ ಉತ್ತಮ ಯೋಜನೆ ರೂಪಿಸಿ ಜಾನುವಾರುಗಳ ಅಭಿವೃದ್ದಿಗಾಗಿ ಸೇವೆ ನೀಡಲು ಸಾಧ್ಯವಾಗಲಿದೆ ಎಂದರು.

ತಾಲೂಕಾ ಪಶುಪಾಲನಾ ಮತ್ತು ಪಶು ವೈದ್ಯಕೀಯ ಇಲಾಖೆ ಸಹಾಯಕ ನಿರ್ದೇಶಕ ಡಾ ಮೋಹನ ಕಮತ, ಪ್ರಮುಖರಾದ ಬಸವರಾಜ ಕಡಾಡಿ,

ಡಾ. ಸುರೇಶ ತಪಶೆಟ್ಟಿ,

ಡಾ. ಶಿವಾನಂದ ಸಂಸುದ್ದಿ ಸೇರಿದಂತೆ ಇಲಾಖೆ ಸಿಬ್ಬಂದಿಗಳು, ರೈತರು ಉಪಸ್ಥಿತರಿದ್ದರು.

# ಮಾನಸಿಕ ಅಸ್ವಸ್ಥ ಮಕ್ಕಳ ದಿವ್ಯಜ್ಯೋತಿ ವಸತಿ ಶಾಲೆಯಲ್ಲಿ ಮಕ್ಕಳ ದಿನಾಚರಣೆ



**ಬಾಗಲಕೋಟೆ:** ನಗರದಪ್ರತಿಷ್ಠಿತಶ್ರೀ.ಬ.ವಿ.ವ.ಸಂಘದ ಸಜ್ಜಲಶ್ರೀ ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯದ ಚಿಕ್ಕಮಕ್ಕಳ ವಿಭಾಗದ ವತಿಯಿಂದ ಮಾನಸಿಕ ಅಸ್ವಸ್ಥ ಮಕ್ಕಳ ದಿವ್ಯಜ್ಯೋತಿ ವಸತಿ ಶಾಲೆ ನವನಗರ ಬಾಗಲಕೋಟನಲ್ಲಿ ಇತ್ತಿಚಿಗೆ ಮಕ್ಕಳ ದಿನಾಚರಣೆ ಕಾರ್ಯಕ್ರಮವನ್ನು ಸಂಭ್ರಮದಿಂದ ಆಚ-ರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಜ್ಜಲಶ್ರೀ ನರ್ಸಿಂಗ್ ವಿಜ್ಞಾನಮಹಾವಿದ್ಯಾಲಯದಪ್ರಾಚಾರ್ಯರಾದಡಾ॥ ದಿಲೀಪ್ ಎಸ್. ನಾಟೇಕರ್ ಇವರು ವಹಿಸಿದ್ದರು.

ಕಾರ್ಯಕ್ರಮವನ್ನು ಉದ್ದೇಶಿಸಿ ಚಿಕ್ಕಮಕ್ಕಳ ವಿಭಾಗದ ಮುಖ್ಯಸ್ಥರಾದ ಡಾ॥. ದಾನೇಶ್ವರಿ ಹಿರೇಮಠ ಮಾತನಾಡಿದರು ಹಾಗೂ

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ, ಮಾನಸಿಕ ಅಸ್ವಸ್ಥ ಮಕ್ಕಳ ದಿವ್ಯಜ್ಯೋತಿ ವಸತಿ ಶಾಲೆಯ ಮುಖ್ಯೋಪಾದ್ಯಯರಾದ ಶ್ರೀ ಅಕ್ಷಯ ಇಂದುಲಕರ್, ಹಾಗೂ ಶ್ರೀಮತಿ ಆನಂದಿ ಇಂದುಲಕರ್ ಆಗಮಿಸಿದ್ದರು. ಸಂಸ್ಥೆಯ ಎಂ.ಎಸ್ಸಿ ಮತ್ತು ಪಿ.ಬಿ.ಬಿ.ಎಸ್ಸಿ ವಿದ್ಯಾರ್ಥಿಗಳಿಂದ ಮಕ್ಕಳ ದಿನಾಚರಣೆಯ ಅಂಗವಾಗಿ ಮಕ್ಕಳಿಗೆ ವಿವಿಧ ಮನರಂಜನೆ ಚಟುವಟಿಕೆಗಳನ್ನು ಆಯೋಜಿಸಲಾಯಿತು ಮತ್ತು ಮಕ್ಕಳಿಗೆ ಸಿಹಿ ಹಂಚುವ ಕಾರ್ಯಕ್ರಮವನ್ನು ನೆರವೇರಿಸಲಾಯಿತು.

ಸದರಿ ಕಾರ್ಯಕ್ರಮಕ್ಕೆ ಬ.ವಿ.ವ. ಸಂಘದ ಸಜ್ಜಲಶ್ರೀ ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯದ ಚಿಕ್ಕಮಕ್ಕಳ ವಿಭಾಗದ ಪ್ರಾಧ್ಯಾಪಕರುಗಳಾದ ಡಾ॥. ಪ್ರಶಾಂತ ಕುಲಕರ್ಣಿ, ಡಾ॥ ಎನ್.ಜಿ ಪಾಟೀಲ, ಶ್ರೀ. ಸಂತೋಷ ಸಜ್ಜನ, ಉಪನ್ಯಾಸಕರುಗಳಾದ ಶ್ರೀಮತಿ. ಶ್ರೀದೇವಿ ತೇಲಿ, ಕುಮಾರಿ. ರೇಣುಕಾ ಜಾಲಿಹಾಳ, ಶ್ರೀಮತಿ ಮಂಜುಳಾ ಹೀರೆಮಠ ಉಪಸ್ಥಿತರಿದ್ದರು.

# ಭಾರತೀಯ ಸಂಸ್ಕೃತಿ ತ್ಯಾಗದ್ದು, ಭೋಗದ್ದಲ್ಲಾ: ನಿರಂಜನಶ್ರೀ

**ತಾಳಿಕೋಟೆ** : ಮನುಷ್ಯನಿಗೆ ಪರಮಾನಂದ ಪ್ರಾಪ್ತಿಯಾಗಲಿಕ್ಕೆ ನಿರಂಬಳವಾಗಿ ಬಧುಕಲಿಕ್ಕೆ ಅಹಂಕಾರವೆಂಬುದನ್ನು ನಾಶ ಮಾಡಿದರೆ ಸುಖವಾಗಿರಲು ಸಾದ್ಯವಾಗಲಿದೆ ಅಹಂಕಾರವೆಂಬುದಕ್ಕೆ ದುಃಖವೇ ಕಾರಣವಾಗಿದ್ದು ಅಹಂಕಾರವೆಂಬುದು ಮರೆಯಾದರೆ ಪರಮಾನಂದವೆಂಬುದು ಪ್ರಾಪ್ತಿಯಾಗುತ್ತದೆ ಎಂದು ಖ್ಯಾತ ಆದ್ಯಾತ್ಮೀಕ ಪ್ರವಚನಕಾರರಾದ ಪ.ಪೂ.ಶ್ರೀ ನಿರಂಜನ ಮಹಾ ಸ್ವಾಮಿಗಳು ನುಡಿದರು.

ಸೋಮವಾರರಂದು ಯೋಗೋತ್ಸವ ಸಮಿತಿ ತಾಳಿಕೋಟೆ ಇವರ ವತಿಯಿಂದ ಸ್ಥಳೀಯ ಕನ್ನಡ ಶಾಲಾ ಮೈಧಾನದಲ್ಲಿ ಏರ್ಪಡಿಸಲಾದ ಸಾಮೂಹಿಕ ಭಜನೆ, ಹಾಗೂ ಆದ್ಯಾತ್ಮೀಕ ಪ್ರವಚನದ 7ನೇ ದಿನದಂದು ಮಾತನಾಡುತ್ತಿದ್ದ ಅವರು ನಾನೇನು ಎನ್ನುವ ಭಾವ ಹೋಗಬೇಕು ಅದು ಹೋಗದಿದ್ದರೆ ಪರಮಾತ್ಮನಲ್ಲಿ ಸ್ಥಳವಿಲ್ಲದಂತಾಗುತ್ತದೆ ಎಂದರು. ಪರಮಾತ್ಮ ಭಾವಮುಖಾಂತರ ಕೆಲಸ ಮಾಡಿಸುತ್ತಾನೆ ಪರಮಾನಂದ ಪ್ರಾಪ್ತಿಯಾಗಬೇಕಾದರೆ ನಾನೇಂಬುದು ಸಾಯುತ್ತದೆ ಆವಾಗ ಪರಮಾನಂದ ಆಗುತ್ತೀರೆಂದರು. ಬೀಜ ಬೀಜವಾಗಿದ್ದರೆ ಅದು ಮೊಳಕೆ ಒಡೆಯಲಾರದು ನಧಿ ಸತ್ತು ಸಮುದ್ರ ರೂಪ ತಾಳುತ್ತದೆ ಸಾಧನೆ ಎಂಬುದನ್ನು ಮಾಡಬೇಕು ಅದು ಅಹಂಕಾರಕ್ಕೆ ಕಾರಣವಾಗಬಾರದೆಂದರು. ನಾನು ವಿಶಿಷ್ಠನೆಂಬ ಭಾವ ಬೇಡಾ ನಾನು ಎನ್ನುವದು ಹೋಗಬೇಕು ನಾನಕ್ಕೆ ಶಕ್ತಿ ತುಂಬುವಂತಹ ಭಾವ ಬರುತ್ತಾ ಹೋದರೆ ಸತ್ಯದಿಂದ ದೂರಾಗುತ್ತೀರಿ ಎಂದರು.

ರವಿಂದ್ರನಾಥ ಠ್ಯಾಗೂರ ಅವರು ಶ್ರೀಮಂತರಿದ್ದರೂ ಕೂಡಾ ನಧಿ ತೀರದಲ್ಲಿ ಕುಠಿರ ಕಟ್ಟಿಸಿಕೊಂಡು ಸಮುದ್ರ ಮತ್ತು ಚಂದ್ರನನ್ನು ನೋಡಿ ಕವನ ಬರೆಯುತ್ತಾರೆ ಆದರೆ ರಾತ್ರಿ ಮೇಣದ ಬತ್ತಿ ಬರೆಯುತ್ತಿದ್ದಾಗ ಅದು ಆರಿ ಹೋಗುತ್ತದೆ ಆವಾಗ ಕತ್ತಲೆ ಆವರಿಸುತ್ತದೆ ಒಂದು ನಿಮಿಷ ಕಣ್ಣು ಮುಚ್ಚಿ ತೆಗೆದು ನೋಡಿದಾಗ ಚಂದ್ರನ ಪ್ರಕಾಶ ಎದ್ದು ಕಾಣಿತು ಯಾಕೆಂದರೆ ಮೇಣ ಬತ್ತಿ ಪ್ರಕಾಶ ಎನ್ನುವದು ಚಂದ್ರನ ಪ್ರಕಾಶ ತಡೆ ಹಿಡಿದಿತ್ತು ಮೇಣಬತ್ತಿ ಅನ್ನುವಂತಹದ್ದನ್ನು ಆರಿಸಿದವರು 20 ವರ್ಷ ಬುದ್ದ, 40 ವರ್ಷ ಅಕ್ಕಮಹಾದೇವಿ, 8 ವರ್ಷ ಶಂಕರಾಚಾರ್ಯ, ಅಷ್ಠಾವಕರು ತಾಯಿಯ ಉದರದಲ್ಲಿದ್ದಾಗಲೇ ಮೇಣಬತ್ತಿ



ಅನ್ನುವಂತಹ ಅಹಂಕಾರವನ್ನು ಆರಿಸಿದ್ದರೆಂದರು. ಅಹಂಕಾರವೆಂಬುದನ್ನು ಆರಿಸಬೇಕು ಜ್ಞಾನದ ರೂಪ ಪ್ರಾಪ್ತಿಯಾಗುತ್ತದೆ ಒಳ್ಳೆಯ ಕೆಲಸ ಮಾಡಬೇಕು ಮಾಡಿ ಮರೆಯಬೇಕೆಂದರು. ಬಸವಣ್ಣನವರು ದಾಸೋಹದ ವ್ಯವಸ್ಥೆ 770 ಆತ್ಮಜ್ಞಾನಿಗಳ ಚಿಂತನೆ ಮಾಡುತ್ತಾ ಸಾಗಿದ್ದರು, ಇದನ್ನೇಲ್ಲಾ ನೋಡಿ ಶರಣರು ಕೇಳುತ್ತಾರೆ ಎಲ್ಲ ಕೆಲಸ ನಿಮ್ಮ ಮೇಲೆ ಬಿದ್ದಿದೆಯಲ್ಲಾ ಅಂದಾಗ ನಾನೇನು ಮಾಡಿಲ್ಲಾವೆಂದು ಬಸವಣ್ಣನವರು ಹೇಳುತ್ತಿದ್ದರಂತೆ. ಗಾಂಧಿಜಿ ಅವರು ಕೂಡಾ ಸ್ವಾತಂತ್ರ್ಯ ತಂದುಕೊಡಲು ಮುಂದಾದರೂ ನಾನು ಎನ್ನುವ ಅಹಂಕಾರ ಅವರಲ್ಲಿ ಇರಲಿಲ್ಲಾ ಹಿಂಸೆ ಇಲ್ಲದೇ ಅಹಿಂಸಾತ್ಮಕವಾಗಿ ಸ್ವತಂತ್ರ ಹೋರಾಟ ಮಾಡಿದರು. ನಾನೇನು ಎಂಬ ಭಾವನೆ ಅವರಲ್ಲಿ ಇರಲಿಲ್ಲಾ ಮನಸ್ಸು ಮಾಡಿದರೆ ರಾಷ್ಟ್ರಪತಿ ಯಾಗಬಹುದಿತ್ತು ಎಂದರು.

ನಾನು ಮಾಡಿನಿ ಎಂಬ ಭಾವ ಬರಬಾರದು ಮಾಡಿ ಮರಿಯಿರಿ ಕೊಟ್ಟು ಮರೆಯಬೇಕು, ಅಂದರೆ ಅಹಂಕಾರ ಭಾವನೆ ಎಂಬುದು ದೂರಾಗುತ್ತದೆ ಎಂದರು. ಭಗವಂತನ ಕೃಪೆಯಿಂದ ಜಗತ್ತು ನಡೆದಿದೆ ಹಿಂದಿನಿಂದಲೂ ನಡೆಯುತ್ತಾ ಬಂದಿದೆ ಭಗವಂತನ ಕೃಪೆ ಇದ್ದರೆ ಬೆಲೆ ಇದೆ ಎಲ್ಲವೂ ಭಗವಂತನ ಕೃಪೆ ಎನ್ನಬೇಕೆಂದರು.ಬಸವಣ್ಣನವರ ವಿನಯ, ಪ್ರೇಮ, ಅವರ ಹೃದಯ ವೈಶಾಲತೆ, ಮುಖದಲ್ಲಿಯ ಪ್ರೇಮ ಎಲ್ಲವನ್ನು ನೋಡಿದ ಅಕ್ಕ ಮಹಾದೇವಿ ಅವರು ಬಸವಣ್ಣನವರಿಗೆ ದೇವರು ಎನ್ನುತ್ತಿದ್ದರೆಂದರು. ಅದರಂತೆ ಸೋಲ್ಲಾಪೂರದ ಸಿದ್ದರಾಮೇಶ್ವರರು ಸಹ ಬಸವಣ್ಣನವರಿಗೆ ದೇವರು ಎಂದಿದ್ದಾರೆ ಅಲ್ಲಮಪ್ರಭುಗಳು ಸಹ ಸಂಗನಬಸವನೇ ದೇವರೆಂದಿದ್ದಾರೆ. ಬಸವಣ್ಣ ಇವರೆಲ್ಲರೂ ಕೊಂಡಾಡಿದಾಗ ಎನಗಿಂತ ಕಿರಿಯರಿಲ್ಲಾ ಎನಗಿಂತ ಹಿರಿಯರಿಲ್ಲಾ ಅನ್ನುವಂತಹ ಮಾತನ್ನು ಆಡಿ ನಾನು ಎಂಬ ಭಾವನೆಯನ್ನು ದೂರಿಕರಿಸಿದ್ದರೆಂದರು.

ವಿನಯ ಸರಳತೆ ಎಂಬುದು ಅಹಂಕಾರವನ್ನು ನಷ್ಟ ಮಾಡುತ್ತದೆ ಸರಳತೆಯೇ ಜೀವನವಾಗಿದೆ ಎಂದು ಚಂದ್ರಗುಪ್ತನನ್ನು ರಾಜನನ್ನಾಗಿ ರೂಪಿಸಿದಂತಹ ಚಾಣಕ್ಯ ಭಾರತ ದೇಶದ ಮೇದಾವಿಯನ್ನು ತಯಾರು ಮಾಡಿದಂತಹ ಚಾಣಕ್ಯ ತನ್ನ ಗುಡಿಸಲಿನಲ್ಲಿ ಚಾಪೆ ಗಡಿಗೆ ಸಾಮ್ರಾಜ್ಯವನ್ನು ನಿರ್ಮಾಣ ಮಾಡಿದ್ದ ಯಾಕೆಂದರೆ ಅವನಲ್ಲಿ ಅಹಂಕಾರವೆಂಬುದು ಇರಲಿಲ್ಲಾವೆಂದರು. ಭಾರತೀಯ ಸಂಸ್ಕೃತಿ ಎಂಬುದು ತ್ಯಾಗದ್ದಾಗಿದೆ ಭೋಗದಲ್ಲಾವೆಂದು ಅಹಂಕಾರ ಬರದಂತಹ ಭೋಜರಾಜನ ಕುರಿತು ಹಾಗೂ ಕಾಳಿದಾಸನು ಬರೆದ ಗ್ರಂಥಗಳ ಕುರಿತು ವಿವರಿಸಿದ ಶ್ರೀಗಳು ಈ ಇರ್ವರೂ ಅರಣ್ಯದಲ್ಲಿ ಹೋದಾಗ ರಸ್ತೆಯೇ ಸಿಗದೇ ಅಲ್ಲಿ ಗುಡಿಸಲಿನಲ್ಲಿದ್ದ ವೃದ್ದೆಯೋರ್ವಳನ್ನು ರಸ್ತೆ ಕೇಳಿದಾಗ ಇವರು ಕೇಳಿದ ಪ್ರಶ್ನೇಗೆ ಆಕೆ ಉತ್ತರಿಸಿ ಕೊನೆಗೆ ಹೆತ್ತ ತಾಯಿ, ಹಾಗೂ ಭೂಮಿ ತಾಯಿ ಇವರು ಸಹನ ಶೀಲರೆಂಬುದನ್ನು ಮರೆಯಬಾರದು ತಂದೆ ತಾಯಿ ಮಕ್ಕಳನ್ನು ದೊಡ್ಡವರನ್ನಾಗಿ ಮಾಡುತ್ತಾರೆ ಮಕ್ಕಳಿಗೆ ಒಳ್ಳೆಯದಾಗಲಿ ಎಂಬ ಭಾವನೆ ಅವರಲ್ಲಿರುತ್ತದೆ ನಿಜವಾಗಿ ಸಹನ ಶೀಲರು ಹೆತ್ತ ತಾಯಿಯಾಗಿರುತ್ತಾಳೆಂದು ಶ್ರೀಗಳು ಕೆಲವು ಚಿಕ್ಕ ಕಥೆಗಳನ್ನು ಹೇಳಿ ನಾನು ಎಂಬ ಭಾವನೆ ಬೇಡಾ ಎಲ್ಲವೂ ನಿನ್ನದೇ ಎನ್ನುವ ಭಾವ ಇದ್ದರೆ ಜೀವನ ಸಾರ್ಥಕವಾಗಲಿದೆ ಎಂದರು. ಈ ಸಮಯದಲ್ಲಿ ಅಸಂಖ್ಯಾತ ಭಕ್ತಸಮೂಹ ಯೋಗೋತ್ಸವ ಸಮಿತಿಯ ಪದಾಧಿಕಾರಿಗಳು, ಹಾಗೂ ಸದಸ್ಯರು ಪಾಲ್ಗೊಂಡಿದ್ದರು.

# ಡಿ.10ರಂದು ವಿಧಾನಸೌಧ ಮುತ್ತಿಗೆ: ಜಯಮೃತ್ಯುಂಜಯ ಸ್ವಾಮೀಜಿ



**ಇಂಡಿ :** ಬೆಳಗಾವಿಯಲ್ಲಿ ಡಿ. 10 ರಂದು ನಡೆಯುವ ವಿಧಾನಸಭೆ ಅಧಿವೇಶನದಲ್ಲಿ ಪಂಚಮಸಾಲಿ ಸಮಾಜಕ್ಕೆ 2 ಎ ಸೇರ್ಪಡೆ ಆಗ್ರಹಿಸಿ ವಿಧಾನಸೌಧಕ್ಕೆ ಮುತ್ತಿಗೆ ಹಾಕಲಾಗುವದೆಂದು ಪಂಚಮಸಾಲಿ ಸಮಾಜದ ಜಗದ್ಗುರು ಜಯಮೃತ್ಯುಂಜಯ ಶ್ರೀಗಳು ಹೇಳಿದರು.

ಪಟ್ಟಣದ ಅಕ್ಕಮಹಾದೇವಿ ಸಹಕಾರ ಸೌಹಾರ್ಧದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು

ಕರ್ನಾಟಕದಲ್ಲಿ ಅತೀ ಹೆಚ್ಚು ದಿನಗಳ ಕಾಲ ಪಂಚಮಸಾಲಿ ಸಮಾಜ 2 ಎ ಸೇರ್ಪಡೆ ಆಗ್ರಹಿಸಿ ಹೋರಾಟ

ನಡೆದಿದೆ.ಪಂಚಮಸಾಲಿ ಸಮಾಜದ ಬೇಡಿಕೆ ದೇಶದ ಗಮನ ಸೆಳೆದಿದೆ. 2021 ರಿಂದ ಹೋರಾಟ ನಡೆದಿದೆ.ಆದರೂ ಈ ವರೆಗೆ ಬೇಡಿಕೆ ಇಡೇರಿಲ್ಲ. ಇಲ್ಲಿಯ ವರೆಗೂ ಸ್ಪಂದಿಸಿಲ್ಲ.ಕಳೆದ ಬಾರಿ ಬಿಜೆಪಿ ಸರಕಾರವಿದ್ದಾಗ ಪಂಚಮಸಾಲಿ

ಸಮಾಜವನ್ನು 2 ಎ ಸೇರ್ಪಡೆ ಬದಲಾಗಿ 2 ಡಿ ಮಾಡಿದರು.ಅದು ಬೇಕಾಗಿಲ್ಲ, ಹೀಗಾಗಿ 2 ಎ ಸೇರ್ಪಡೆಗೆ ಹೋರಾಟ ಮುಂದು ವರೆದಿದೆ.ಮತ್ತೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಾಗ ಮಾತುಕತೆಗೆ ಕರೆದಿಲ್ಲ.

ವಿಧಾನಸಭೆಯಲ್ಲಿ ಚರ್ಚೆ ನಡೆದಿಲ್ಲ, ಹೀಗಾಗಿ ರಾಜ್ಯದ ವಕೀಲರು ಬೆಳಗಾಂವಿಯಲ್ಲಿ ಬೃಹತ್ ಪ್ರತಿಭಟನೆ ಮಾಡಿ

ಗಮನ ಸೆಳೆದಿದ್ದರು. ರಾಜ್ಯ ಸರಕಾರ ಪಂಚಮಸಾಲಿ 2 ಎ ಕೇಂದ್ರಕ್ಕೆ ಶಿಫಾರಸು ಮಾಡಿ ಕಳುಹಿಸಬೇಕು. ವಿಳಂಬವಾಗುತ್ತಿದ್ದು ಸರಕಾರದ ಗಮನ ಸೆಳೆಯಲು ಡಿ. 10 ರಂದು ವಿಧಾನಸೌಧ ಮುತ್ತಿಗೆ ಹಾಕಲು ನಿರ್ಧರಿಸಿದೆ.

ಅಂದು ಅಂದಾಜು ಐದು ಸಾವಿರ ಟ್ರ್ಯಾಕ್ಟರಗಳು ಮತ್ತು ಸಾವಿರಾರು ಕಾರ್ಯಕರ್ತರು ಸೇರಿ ವಿಧಾನಸೌಧಕ್ಕೆ ಮುತ್ತಿಗೆ ಹಾಕುವ ಕಾರ್ಯಕ್ರಮವಿದೆ. ವಕೀಲರ ಸಂಘದ ಮುಂದಾಳತ್ವದಲ್ಲಿ ನಡೆಯುವ ಈ ಪ್ರತಿಭಟನೆಗೆ ವಿಜಯಪುರ ಜಿಲ್ಲೆಯ ಪ್ರತಿ ಹಳ್ಳಿಯಿಂದ ಕನಿಷ್ಠ ಐದು ಟ್ರ್ಯಾಕ್ಟರ ತರಬೇಕು. ಇಲ್ಲವೆ ವಾಹನಗಳನ್ನು ತರಬೇಕು ಎಂದರು.

ಈಗಾಗಲೇ ವಿಜಯಪುರ ಜಿಲ್ಲೆಯ ಎಲ್ಲ ತಾಲೂಕುಗಳ ವಕೀಲರ ಸಂಘ ತನ್ನ ಬೆಂಬಲ ಸೂಚಿಸಿದ್ದು ಈ ಕುರಿತು ಬೆಳಗಾಂವ, ವಿಜಯಪುರ, ಬಾಗಲಕೋಟ ಸೇರಿದಂತೆ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಪೂರ್ವ ಭಾವಿ ಸಭೆ ನಡೆಸಲಾಗುವದು ಎಂದರು.

ಈಗಾಗಲೇ ದಾವಣಗೆರೆಯ ರಾಜ್ಯ ಪಂಚಮಸಾಲಿ ಹೋರಾಟದ ಯುವ ಘಟಕದ ಉಪಾಧ್ಯಕ್ಷ ಅಜಯಕುಮಾರರವರು ಹೋರಾಟಕ್ಕೆ ದಾವಣಗೆರೆಯಿಂದ ಒಂದು ಸಾವಿರ ಟ್ರ್ಯಾಕ್ಟರ ಬರಲಿದ್ದು ಅದಕ್ಕೆ ಎಣ್ಣೆಯ ಖರ್ಚನ್ನು ತಾವೇ ನೀಡುವದಾಗಿ ತಿಳಿಸಿದ್ದಾರೆ ಎಂದರು.


ಪತ್ರಿಕಾಗೋಷ್ಠಿಯಲ್ಲಿ ಇಂಡಿ ಪಂಚಮಸಾಲಿ ಸಮಾಜದ ಅಧ್ಯಕ್ಷ ವಿ.ಎಚ್.ಬಿರಾದಾರ, ನ್ಯಾಯವಾದಿ ಎಸ್.ಆರ್.ಬಿರಾದಾರ, ನ್ಯಾಯವಾದಿ ಡಿ.ಜಿ. ಜೋತಗೊಂಡ ,ಮಂಜುನಾಥ ಕಾಮಗೊಂಡ, ಶರಣು ಬಂಡಿ, ಉಮೇಶ ಬಳಬಟ್ಟಿ,ಜೆ.ಬಿ.ಬೆನೂರ, ಶಿವಾನಂದ ಚಾಳಿಕಾರ , ವಿ.ಪಿ. ಪಾಟೀಲ,ಜಿ.ಎಸ್.ಪಾಟೀಲ ಮತ್ತಿತರಿದ್ದರು.

# ಹುರುಳಿಲ್ಲದ ಲೆಕ್ಕ ಪತ್ರದ ನಾಟಕೀಯ ಹೋರಾಟ

**ಝಳಕಿ** : ಇಂಡಿ ಶಾಂತೇಶ್ವರ ದೇವಸ್ಥಾನದ ಎದುರು ಕಮಿಟಿಯ ಲೆಕ್ಕ ಪತ್ರ ಬಹಿರಂಗ ಪಡಿಸುವಂತೆ ಹೋರಾಟ ನಡೆಸಿದ್ದು ಯಾವ ಪುರುಷಾರ್ಥಕ್ಕೆ ತಿಳಿಯದಾಗಿದೆ ಎಂದು ಶಾಂತೇಶ್ವರ ಕಮೀಟಿಯ ಅಧ್ಯಕ್ಷರು ಕಾಸುಗೌಡ ಬಿರಾದಾರ ಪತ್ರಿಕಾ ಗೋಷ್ಠಿ ನಡೆಸಿ ಮಾತನಾಡಿದರು.

ದೇವಸ್ಥಾನದ ಎದುರು ಸುಖಾ ಸುಮ್ಮನೆ ಹೋರಾಟ ನಡೇಸೋದು ಸರಿಯಲ್ಲ, ಲೆಕ್ಕ ಪತ್ರದ ಸಂಪೂರ್ಣ ಮಾಹಿತಿ ನೂರಾರು ಜನರ ಸಮ್ಮುಖದಲ್ಲಿ ಲೆಕ್ಕ ಪತ್ರದ ಪರೀಶಿಲನೆ ನಡೆಸಲಾಗಿದ್ದು,

ನಾಮಫಲಕದ ಮೇಲೆ ಸಂಪೂರ್ಣ ಬಹಿರಂಗ ಪಡಿಸಿದ್ದರೂ ಮತ್ತೇ ಅದೇ ಪ್ರಶ್ನೆ ಯಾತಕ್ಕೆ, ಮಾಹಿತಿ ಬೇಕಾದವರು ದೇವಸ್ಥಾನದ ಒಳಗೆ ಬಂದು ನೋಡಲಿ, ನಾಟಕೀಯ ಹೋರಾಟದಲ್ಲಿ ಹುರುಳಿಲ್ಲ, ರಾಜಕೀಯ ಬೇಕಾದರೆ ಹೊರಗಡೆ ಮಾಡೋಣ, ದೇವಸ್ಥಾನದಲ್ಲಿ ಬೇಡಾ, ಸಾರ್ವಜನಿಕರು ಇಂತಹ ನಾಟಕೀಯ ಹೋರಾಟಕ್ಕೆ ತಲೆ ಕೆಡಸಿಕೊಳ್ಳುವ ಅಗತ್ಯವಿಲ್ಲ,



ಲೆಕ್ಕ ಪತ್ರದಲ್ಲಿ ಯಾವುದೇ ವ್ಯತ್ಯಾಸ ಆಗಿರುವುದಿಲ್ಲ ಮತ್ತು ಯಾವುದೇ ತರನಾದ ಕಳಪೆ ನಡೆದಿಲ್ಲ, ವ್ಯತ್ಯಾಸ ಆಗಿರುವುದಿಲ್ಲ ಮತ್ತು, ವ್ಯತ್ಯಾಸ ತೋರಿಸಿದಲ್ಲಿ ನಾನು ಅದನ್ನು ಎದುರಿಸಲು/ನಿಭಾಯಿಸಲು ಸಿದ್ದ, ನಾವೆಲ್ಲರೂ ಒಂದಾಗಿ, ಚೆಂದಾಗಿ ಜನರ ಸಹಕಾರದಿಂದ ಎಂದಿನಂತೆ ಡಿ–09ರಿಂದ ಡಿ–11ರವರೆಗೆ ಶಾಂತೇಶ್ವರ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನೆರವೇರಿಸೋಣ ಎಂದು ಕಮಿಟಿಯ ಅಧ್ಯಕ್ಷರು ಕಾಸುಗೌಡ ಬಿರಾದಾರ ಪ್ರಕಟಣೆಗೆ ತಿಳಿಸಿದರು.

# ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ ಗದಗ ಜಿಲ್ಲಾ ಘಟಕದಿಂದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘಕ್ಕೆ ಅವಿರೋಧವಾಗಿ ಆಯ್ಕೆಗೊಂಡ ಶಿದ್ದಪ್ಪ ಎನ್. ಲಿಂಗದಾಳರವರಿಗೆ ಸನ್ಮಾನ

**ಗದಗ** : ಕಳೆದ ವರ್ಷ ಹಮ್ಮಿಕೊಳ್ಳಲಾಗಿದ್ದ ನವಂಬರ್ 26 ಸಂವಿಧಾನ ಸರ್ಮರ್ಪಣಾ ದಿನ ಸಂವಿದಾನ ಜಾಗೃತಿಯ ಭೀಮರಥ ಮತ್ತು ಯಶಸ್ವಿಗೊಳಿಸಿ ರಾಜ್ಯದ ಗಮನಸೆಳೆದ ಮತ್ತು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಗದಗ ಜಿಲ್ಲಾ ಘಟಕದ 2024–29ನೇ ಸಾಲಿನ ನಿರ್ದೇಶಕರ ಚುನಾವಣೆಯಲ್ಲಿ ಆರೋಗ್ಯ ಇಲಾಖೆಯಿಂದ 2ನೇ ಬಾರಿಗೆ ಸ್ಪರ್ಧಿಸಿದ್ದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಗದಗ ಜಿಲ್ಲಾ ಘಟಕದ ನಿಕಟಪೂರ್ವ ಹಿರಿಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿದ ಚಲವಾದಿ ಸಮಾಜದ ಅಭಿವೃದ್ದಿಯ ಚಿಂತಕರಾದ ಶಿದ್ದಪ್ಪ ಎನ್ ಲಿಂಗದಾಳ 2024–29ನೇ ಸಾಲಿನ ನಿರ್ದೇಶಕರುಚುನಾವಣೆಯಲ್ಲಿಅವಿರೋಧವಾಗಿ ಆಯ್ಕೆಗೊಂಡಿರುವ ನಿಮಿತ್ಯ ಕರ್ನಾಟಕ ರಾಜ್ಯ ಛಲವಾಧಿ ಮಹಾಸಭಾ ಬೆಂಗಳೂರು ಗದಗ ಜಿಲ್ಲಾ ಘಟಕದಿಂದ ಜಿಲ್ಲಾ ಅಧ್ಯಕ್ಷರಾದ ಎಲ್ ನಾರಾಯಣಸ್ವಾಮಿ ಮತ್ತು ಡಿಎಸ್.ಎಸ್. ಜಿಲ್ಲಾ ಸಂಚಾಲಕರಾದ ವೆಂಕಟೇಶಯ್ಯನವರು ಸನ್ಮಾನಿಸಿ ಗೌರವಿಸಿದರು.

ಗದಗ ಪ್ರವಾಸಿ (ಐ.ಬಿ)ಮಂದಿರದಲ್ಲಿ ಏರ್ಪಡಿಸಲಾಗಿದ್ದ ಕರ್ನಾಟಕ ರಾಜ್ಯ ಛಲವಾಧಿ ಮಹಾಸಭಾ ಬೆಂಗಳೂರು ಗದಗ ಜಿಲ್ಲಾ ಘಟಕದಿಂದ ರಾಜ್ಯಾಧ್ಯಕ್ಷರು ಐಎಎಸ್.ನಿವೃತ್ತ ಅಧಿಕಾರಿಗಳಾದ ಸಿದ್ದಯ್ಯನವರ ಮಾರ್ಗದಶನದಲ್ಲಿ ಹಮ್ಮಿಕೊಳ್ಳಲಾಗಿದ್ದ ನವಂಬರ್ 26 ಸಂವಿಧಾನ ಸರ್ಮರ್ಪಣಾ ದಿನ ಸಂವಿದಾನ ಜಾಗೃತಿಯ ಭೀಮರಥ ಮತ್ತು ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಕರ್ನಾಟಕ ರಾಜ್ಯ ಛಲವಾಧಿ ಮಹಾಸಭಾ ಜಿಲ್ಲಾ ಗದಗ ಜಿಲ್ಲಾ ಖಜಾಂಚಿಗಳಾದ ಚಂದ್ರಶೇಖರ ಕಾಳೆಯವರು ಕೆಳೆದ ಸಲ ಗದಗ ತಾಲೂಕಿನ ಗ್ರಾಮಗಳಲ್ಲಿ ಡಾ.ಬಿ.ಆರ್.ಅಂಬೇಡ್ಕರವರ ಸಂದೇಶಗಳನ್ನೊತ್ತ ಭೀಮರಥವು ಅದ್ದೂ–ರಿಯಾಗಿ ಭವ್ಯಸ್ವಾಗತದೊಂದಿಗೆ ಸಂವಿಧಾನದ ಜಾಗೃತಿಯನ್ನುಮೂಡಿಸುಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಹಕಾರ ನೀಡಿ ಎಲ್ಲರಿಗೂ ಧನ್ಯವಾದಗಳನ್ನು ಹೇಳಿ ನಮ್ಮ ಬಾಳಿಗೆ ಬೆಳಕನ್ನು ಸಂವಿಧಾನವನ್ನು ರಕ್ಷಾ ಕವಚವಾಗಿ ಡಾ.ಬಿ.ಆರ್.ಅಂಬೇಡ್ಕರವರುನೀಡಿದ್ದುಅದನ್ನು ರಕ್ಷಿಸಿಕೊಳ್ಳವಂತಹ ಜಾವಾಬ್ದಾರಿ ನಮ್ಮೆಲ್ಲರ ಮೇಲಿದೆ ನಾವು ಡಾ.ಅಂಬೇಡ್ಕರವರ ಕನಸನ್ನು ನನಸು ಮಾಡಬೇಕಾದರೆ ಅವರು ತೋರಿಸಿದ ಮಾರ್ಗದಲ್ಲಿ ನಾವು ನಡೆಯಬೇಕಾಗಿದೆ ಗದಗ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾದಿಂದ ಮಹಾನ್ ಸಾಧನೆ ನಾವೆಲ್ಲರುಸಾಕ್ಷೀಕರಿಸಿದ್ದೇವೆಭೀಮರಥವನ್ನು ಶಹರ ಮತ್ತು ಗ್ರಾಮೀಣ ಪ್ರದೇಶಕ್ಕೆ ಹೋದಾಗ ಪಟ್ಟಣ ಪಂಚಾಯತಿ ಮತ್ತು ಗ್ರಾಮ ಪಂಚಾಯತಿಯವರು ಗ್ರಾಮದ ಶೋಷಿತ ವರ್ಗದವರು ಪೊಲೀಸ್ ಇಲಾಖೆಯವರು



ಭೀಮರಥಕ್ಕೆ ಭವ್ಯವಾದ ಸ್ವಾಗತವನ್ನು ಪುಷ್ಪಾರ್ಚನೆಯ ಮೂಲಕ ಸ್ವಾಗತಕೋರಿದ್ದು ಇದೊಂದು ಇತಿಹಾಸವನ್ನು ಸೃಷ್ಠಿಮಾಡಿತು ನಮ್ಮ ಭೀಮರಥದ ಕಾರ್ಯಕ್ರಮವನ್ನು ರಾಜ್ಯಾದ್ಯಂತ ಸರ್ಕಾರವೇ ಮಾಡಿದ್ದು ನಮ್ಮ ಕಾರ್ಯಕ್ಕೆಹೆಮ್ಮೆಯನ್ನೂಂಟುಮಾಡಿತುಎಂದು ಕರ್ನಾಟಕ ರಾಜ್ಯ ಛಲವಾಧಿ ಮಹಾಸಭಾ ಜಿಲ್ಲಾ ಗದಗ ಜಿಲ್ಲಾ ಖಜಾಂಚಿಗಳಾದ ಚಂದ್ರಶೇಖರ ಕಾಳೆ ಹೇಳಿದರು

ಭವ್ಯಭಾರತದ ದೇಶಕ್ಕೆ ಭದ್ರಭೂನಾಧಿ ಹಾಕಿ, ದೇಶಕ್ಕೆ ಸಮಾನತೆಯನ್ನು ತಂದುಕೊಟ್ಟಂತಹ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಸಂವಿಧಾನ ಸಮರ್ಪಣಾ ದಿನವನ್ನು ದೇಶಾದ್ಯಂತ ಆಚರಣೆ ಮಾಡುತ್ತಿರುವುದು ಸಂತಸದ ವಿಷಯವಾಗಿದೆ ಆದ್ದರಿಂದ ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ ಗದಗ ಜಿಲ್ಲಾ ಘಟಕದಿಂದ ಗದಗ ಜಿಲ್ಲೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ರವರು ದೇಶಕ್ಕೆ ನೀಡಿದ ಕೊಡುಗೆಯ ಬಗ್ಗೆ ಛಲವಾದಿಗಳಾದನಾವುಹೆಚ್ಚುಪ್ರಚಾರಮಾಡುವ ಮುಖಾಂತರ ಸಮಾಜಕ್ಕೆ ತಿಳಿಸುವಂತಹ ಮಹತ್ತರವಾದ ಕಾರ್ಯವನ್ನು ಮಾಡುವುದು ನಮ್ಮೆಲ್ಲರ ಆಧ್ಯಕರ್ತವ್ಯ ಆಗಿರುವುದರಿಂದ ಶಹರಮತ್ತುಪತ್ರಿಯೊಂದುಗ್ರಾಮಕ್ಕೆಸಂವಿಧಾನ ಪ್ರಚಾರ ಆಂದೋಲನದ ಭೀಮರಥದ ಜಾಥಾ ಮುಖಾಂತರ ತೆರಳಲು ದಿನಾಂಕ 26.11.2024 ರಂದು ನಡೆಸಲು ನಿರ್ಧಾರ ಮಾಡೋಣ ಮತ್ತು ಎಲ್ಲರ ಸಹಕಾರ ನೀಡುವುದು ಮುಖ್ಯವಾಗಿ ನೀಡಬೇಕೆಂದರು

ಡಿಎಸ್.ಎಸ್. ಸಂಚಾಲಕರಾದ ವೆಂಕಟೇಶಯ್ಯನವರು ಮಾತನಾಡಿ ಕಳೆದ ವರ್ಷ ತಾವು ಸಹರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಡಾ.ಅಂಬೇಡ್ಕರ ಸ್ವಾಭಿಮಾನಿ ಸಂದೇಶಗಳನ್ನೊತ್ತ ರಥವು ನವಂಬರ್ 26 ಸಂವಿಧಾನ ಜಾರಿಗೆ ಬಂದ ದಿನದಂದು ಗದಗ ತೋಂಟದಾರ್ಯ ಮಠದಿಂದ ಜಾಥಾ ಆರಂಭಗೊಂಡುಸಹರಮತ್ತುಗದಗತಾಲೂಕಿನ ಪ್ರತಿಯೊಂದು ಗ್ರಾಮಕ್ಕೆ ತೆರಳಿ ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಸಂವಿಧಾನದ ಕೊಡುಗೆ ಬಗ್ಗೆ ಜಾಗೃತಿಯನ್ನು ಮೂಡಿಸಿದ ಕಾರ್ಯ ಶ್ಲಾಘನೀಯವಾಗಿದ್ದುಕಛಾಡಿಳ್ಳೆಯೀತಿಯಲ್ಲಿ ಸಂಘಟಿರಿ ನಾವು ಭೀಮರಥಯಾತ್ರೆಯಲ್ಲಿ ಎರಡು ದಿವಸ ಭಾಗವಹಿಸಿ ನನ್ನ ಸೇವೆಯನ್ನು ಡಾ.ಅಂಬೇಡ್ಕರವರಿಗೆಸಮರ್ಪಿಸಿಗೌರವವನು ಸಮರ್ಪಿಸುತ್ತೇನೆ ಎಂದು ಹೇಳಿದರು ನಡೆಸಲಾಗುವುದು ಎಂದು ಹೇಳಿದರು.

ಕರ್ನಾಟಕ ರಾಜ್ಯ ವೀರವನಿತೆ ಒನಕೆ ಓಬವ್ವ ಸಂಘ ರಾಜ್ಯ ಸಮಿತಿಯ ಸದಸ್ಯೆ ಮತ್ತು ಜಿಲ್ಲಾ ಅಧ್ಯಕ್ಷರಾದ ವಾಸಂತಿ ಮಲ್ಲಾಪೂರ ಮತ್ತು ಗೊಜನೂರ ಗ್ರಾಮ ಪಂಚಾಯತಿಯ ನೂತನ ಅಧ್ಯಕ್ಷರಾದ ಮಂಜುನಾಥ ಚಲವಾದಿಯವರು ಮಾತನಾಡಿ ಡಾ.ಬಿ.ಆರ್.ಅಂಬೇಡ್ಕರ್ ಸಂದೇಶಗಳನ್ನುಗ್ರಾಮೀಣಪ್ರದೇಶದಲ್ಲಿನಎಲ್ಲಾ ಸಮುದಾಯಕ್ಕೆ ತಲುಪಿಸಿ ಜಾಗೃತಿಗೊಳಿಸಿದ ಎಲ್ಲ ಸಂಘಟಕರಿಗೆ ಅಭಿನಂದನೆ ತಿಳಿಸಿದರು ಮತ್ತುಕಾರ್ಯಕ್ರಮಕ್ಕೆನಾವುಸಹಾಯಸಹಕಾರಿ ನೀಡುತ್ತೇವೆ ಎಂದು ಹೇಳಿದರು

ಕಾರ್ಯಕ್ರಮದ ಅಧ್ಯಕ್ಷತೆಯನ್ನುವಹಿಸಿದ್ದ ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ ಜಿಲ್ಲಾ ಅಧ್ಯಕ್ಷರಾದ ಎಲ್ ನಾರಾಯಣಸ್ವಾಮಿಯವರು ಮಾತನಾಡಿ ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ ಗದಗ ಜಿಲ್ಲಾ ಘಟಕದಿಂದ ಕಳೆದ ಸಲ ನಾವು ಹಮ್ಮಿಕೊಂಡ ಶಹರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಡಾ.ಅಂಬೇಡ್ಕರ ಸ್ವಾಭಿಮಾನಿ ಸಂವಿಧಾನ ಜಾಗೃತಿ ಸಂದೇಶದ ಭೀಮರಥವು ಗದಗ ತೋಂಟದಾರ್ಯ ಸಿದ್ದರಾಮ ಶ್ರೀಗಳು ,ಕಾನೂನು ಸಚಿವರಾದ ಡಾ.ಹೆಚ್.ಕೆ.ಪಾಟೀಲರವರು ಮತ್ತು ನಿವೃತ್ತ ನಾಯಾಧೀಶರಾದ ಹೆಚ್. ಎಸ್.ನಾಗಮಹೋಹನ್ ದಾಸ್ ರವರಿಂದು ಅಂದು ಚಾಲನೆ ದೊರೆಯಿತು ಈ ಕಾರ್ಯಕ್ರಮ ಗದಗ ಜಿಲ್ಲೆಯ ಕಿರ್ತಿಯನ್ನು ಹೆಚ್ಚಿಸಿದ್ದು ನಮಗೆ ಬಹಳಷ್ಟು ಸಂತೋಷವನೂಂಟು ಮಾಡಿದೆ. ನಮ್ಮೆಲ್ಲರ ಕಲ್ಪನೆಯ ಭೀಮರಥವನ್ನು ಸರ್ಕಾರವು ಸಂವಿಧಾನ ಜಾಗೃತಿ ರಥಗಳನ್ನು ರಾಜ್ಯಾದ್ಯಂತ 31 ಜಿಲ್ಲೆಗಲ್ಲಿ ಡಾ.ಬಿ.ಆರ್. ಅಂಬೇಡ್ಕರವರ ಸಂವಿಧಾನದ ಕೊಡುಗೆ ಜಾಗೃತಿಯನ್ನು ಮೂಡಿಸಿದಕ್ಕೆ ಸರ್ಕಾರಕ್ಕೆ ನಾವು ಅಭಿನಂದನೆಳನ್ನು ಸಲ್ಲಿಸುತ್ತೇವೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಗದಗ ಜಿಲ್ಲಾ ಘಟಕಕ್ಕೆ ನೂತನ ನಿರ್ದೇಶಕರಾಗಿ ಅವಿರೋದವಾಗಿ ಆಯ್ಕೆಗೊಂಡ ಸಿದ್ದಪ್ಪ ಎನ್ ಲಿಂಗದಾಳ ಹಾಗೂ ಗೊಜನೂರ ಗ್ರಾಮ ಪಂಚಾಯತಿಯ ನೂತನ ಅಧ್ಯಕ್ಷರಾದ ಮಂಜುನಾಥ ಚಲವಾದಿಯವರನ್ನು ಸನ್ಮಾನಿಸಿ ಗೌರವಿಸಲಾಯಿತು.

ವೇದಿಕೆಯ ಮೇಲೆ ಡಿಎಸ್.ಎಸ್. ಜಿಲ್ಲಾ ಸಂಚಾಲಕರಾದ ಪ್ರಕಾಶ ಕೆಲೂರು. ಛಲವಾದಿ ಯುವ ಬ್ರಿಗೇಡ್ ಅಧ್ಯಕ್ಷರಾದ ಮಹಾಂತೇಶ ಮದ್ನೂರು ಸಂತೋಷ ಕಲ್ಯಾಣಿ ಸೈಯ್ಯದ ಹುಣಸಿಮರ. ರವಿ ಎಚ್.ಕರಬಸಣ್ಣವರ ಲೋಹಿತ್ ಬಿಳಿಯಲಿ ಮಲ್ಲಿಕಾರ್ಜುನ ಕನಕಮ್ಮನವರ. ರವಿ ಕರಬಸಣ್ಣವರ ರೋಹಿತ್ ಬಿಳೆಯಲಿ ರಾಮಕೃಷ್ಣಬೇವಿನಕಟ್ಟಿ ಮುಂತಾದ ಜಿಲ್ಲಾಪದಾಧಿಕಾರಿಗಳುಉಪಸ್ಥಿತರಿದ್ದರುಜಿಲ್ಲಾ ಸಮಿತಿ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ವಿರಕ್ತಮಠದ ಪರಿಸರ ಕುಟೀರದಲ್ಲಿ ಸ್ನೇಹ ಸಮ್ಮಿಲನ ಕಾರ್ಯಕ್ರಮ ರಕ್ತಸಂಬಂಧಕ್ಕಿಂತಲೂ ಸ್ನೇಹ ಸಂಬಂಧ ಮಿಗಿಲು: ಪ್ರಭುಶ್ರೀ

**ಮಹಾಲಿಂಗಪುರ** : ರಕ್ತ ಸಂಬಂಧಗಳಿಗಿಂತಲೂ ಮಿಗಿಲಾದದ್ದು ಸ್ನೇಹ ಸಂಬಂಧ, ಇಂದು ಸಾಂಧರ್ಬಿಕವಾಗಿ ದೂರವಾಗಿರುವ ಆತ್ಮೀಯ ಸಂಬಂಧಗಳನ್ನು ಸ್ನೇಹ ಸಮ್ಮಿಲನದಂತಹ ಕಾರ್ಯಕ್ರಮಗಳು ಬೆಸೆಯಲು ಸೇತುವೆಯಾಗಿವೆ ಎಂದು ಚಿಮ್ಮಡ ವಿರಕ್ತಮಠದ ಪ್ರಭು ಮಹಾಸ್ವಾಮಿಗಳು ಹೇಳಿದರು.

ಸಮೀಪದ ಚಿಮ್ಮಡ ಗ್ರಾಮದ ವಿರಕ್ತಮಠದ ಪರಿಸರ ಕುಟೀರ ಆಶ್ರಮದಲ್ಲಿ ಮಹಾಲಿಂಗಪುರದ ಎಸ್‌ಸಿಪಿ ಪ್ರೌಢಶಾಲೆಯ 1986–87ನೇ ಸಾಲಿನ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ಸ್ನೇಹ ಸಮ್ಮಿಲನ ಕಾರ್ಯಕ್ರಮದ ಸಾನಿಧ್ಯವಹಿಸಿ ಮಾತನಾಡಿದ ಅವರು ಇಂದಿನ ಯಾಂತ್ರೀಕೃತ ಬದುಕಿನಲ್ಲಿ ರಕ್ತ ಸಂಬಂಧಗಳ ಮಧ್ಯೆ ಕಾಲ ಕಳೆಯಲು ಸಾಧ್ಯವಾಗದೆ ಮೊಬೈಲ್‌ನೊಂದಿಗೆ ಕಾಲ ಕಳೆಯುವಂತಾಗಿರುವುದು ವಿಪರ್ಯಾಸ. ಕೆಲವು ಸಮಯವನ್ನಾದರೂ ಮೀಸಲಿಟ್ಟು



ಕುಟುಂಬ ಹಾಗೂ ಸಂಬಂಧಗಳಿಗೆ ಸಮಯ ಕೊಡಬೇಕಿದೆ ಎಂದರು.

ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ಮಹಾಂತೇಶ ಹಿಟ್ಟಿನಮಠ, ಶ್ರೀಕಾಂತ ಮಾಳಿ, ಶುಭಾಂಗಿಣಿ ಇಂಡಿಕರ, ಮಹಾನಂದಾ ಗೊಂಬಿ, ಹನಮಂತ ಶಿರೋಳ, ಪ್ರಭು ನೇಸೂರ, ಶಿವಲಿಂಗ ಟಿರಕಿ ಮಾತನಾಡಿದರು. ಮನೋಹರ ಶಿರೋಳ, ಶಿವಾನಂದ ಬಾಗೇವಾಡಿ, ಪಾರ್ವತಿ ಸೋರಗಾಂವಿ, ಶಂಕರ ಹೊಸಕೋಟಿ, ವಿವೇಕಾನಂದ ಕಡಪಟ್ಟಿ, ಬಸವರಾಜ ಪರೀಟ, ಮಹಾಲಿಂಗ ಹಿಕಡಿ, ಸದಾಶಿವ ಕಂಬಳಿ ಸೇರಿದಂತೆ ಹಲವರು ಇದ್ದರು.

ಪ್ರಭು ಮಹಾಸ್ವಾಮಿಗಳು ಶ್ರೀಮಠದ ಪರವಾಗಿ ಮಹಿಳಾ ಸಹಪಾಠಿಗಳಿಗೆ ತವರಿನ ಕಾಣಿಕೆಯಾಗಿ ಹಸಿರು ಸೀರೆ, ಅರಿಷಿಣ ಕುಂಕುಮದ ಭಾಗಿನ ನೀಡಿ ಗೌರವಿಸಿದರು. ಹಲವು ಸಾಧಕರನ್ನು ಸತ್ಕರಿಸಲಾಯಿತು. ಶಿಲ್ಪಾ ಗುಜ್ಜರ ಪ್ರಾರ್ಥಿಸಿದರು. ಶ್ರೀಕಾಂತ ಮಾಳಿ ನಿರೂಪಿಸಿ–ವಂದಿಸಿದರು.

# ಧೈರ್ಯ ಮತ್ತು ದೇಶ ಪ್ರೇಮದ ಸಂಕೇತ, ಟಿಪ್ಪು ಸುಲ್ತಾನ್: ಸಲೀಮ ಮೋಮಿನ

**ಬಾಗಲಕೋಟೆ** : ಬ್ರಿಟಿಷರ ಕಪಿಮುಷ್ಟಿಗೆ ಒಳಗಾಗುತ್ತಿದ್ದ ಭಾರತವನ್ನು ಸ್ವಾತಂತ್ರ್ಯಗೊಳಿಸಬೇಕೆಂದು ಸೈನಿಕತ್ತಿ ಯುದ್ಧ ನೀತಿಗಳನ್ನು ರೂಪಿಸಿ ಸ್ವತಂತ್ರದ ಕಿಡಿಯನ್ನು ಹೊತ್ತಿಸಿದ ಟಿಪ್ಪು ಸುಲ್ತಾನ ಧೈರ್ಯ ಮತ್ತು ದೇಶಪ್ರೇಮದ ಸಂಕೇತ ಎಂದು ಟಿಪ್ಪು ಸುಲ್ತಾನ ಸಂಘದ ಜಿಲ್ಲಾ ಅಧ್ಯಕ್ಷ ಸಲೀಮ ಮೋಮಿನ ಹೇಳಿದರು. ಬುಧವಾರ ನಗರದ ಬಿಲಾಲ್ ಮಸೀದಿ ಹಾಗೂ ಫಂಕಾ ಮಸ್ಜಿದ್ ಹತ್ತಿರದ ಟಿಪ್ಪು ಸುಲ್ತಾನ್ ವೃತ್ತದಲ್ಲಿ ಟಿಪ್ಪು ಸುಲ್ತಾನ್ ಸಂಘದ ವತಿಯಿಂದ ಆಯೋಜಿಸಿದ್ದ ಹಜರತ್ ಟಿಪ್ಪು ಸುಲ್ತಾನ ರವರ 275 ನೇ ಜಯಂತಿ ಕಾರ್ಯಕ್ರಮದಲ್ಲಿ ಟಿಪ್ಪು ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಮಾತನಾಡಿದರು.



ದೇಶ ಕಂಡ ಅಪ್ರತಿಮ ವೀರ ಸೇನಾನಿ, ದೇಶಪ್ರೇಮಿ, ಸ್ವತಂತ್ರ ಹೋರಾಟಗಾರ ಮತ್ತು ಪರ ಧರ್ಮ ಸಹಿಷ್ಣುತೆಯ ಸೌಹಾರ್ದತೆಯ ಧೀರ ಟಿಪ್ಪು ಸುಲ್ತಾನ.

ಹುಲಿಯಂತೆ ಬದುಕಿದ ರಾಜ. ಟಿಪ್ಪು ಸುಲ್ತಾನ ರವರ ಜೀವನದ ಮಾದರಿಯನ್ನು ಪ್ರತಿಯೊಬ್ಬರು ಸ್ಮರಿಸಬೇಕು. ಈಸ್ಟ್ ಇಂಡಿಯಾ ಕಂಪನಿಯ ಸಾಮ್ರಾಜ್ಯದ ವಿಸ್ತಾರವನ್ನು ತಡೆಯಲು ನಾಲ್ಕು ಮಹತ್ವದ ಯುದ್ಧಗಳಲ್ಲಿ ಭಾಗವಹಿಸಿದ ವೀರ ಸೇನಾನಿ. ಇವರ ಕಾಲದಲ್ಲಿ ದೇಶದಲ್ಲಿಯೇ ರಾಕೇಟ್ ಹಾ–ರಿಸುವ ಮೂಲಕ ಪ್ರಥಮ ಕ್ಷಿಪಣಿ ಜನಕ ಎನಿಸಿಕೊಂಡರು. ನೆಲ ಜಲ ನಾಡು ರಕ್ಷಣೆಗಾಗಿ ತನ್ನ ಹೆತ್ತ ಮಕ್ಕಳನ್ನೇ ಒತ್ತೆ ಇಟ್ಟು ಬ್ರಿಟಿಷರ ವಿರುದ್ಧ ಹೋರಾಡಿದ ಸ್ವತಂತ್ರ ಸೇನಾನಿಯಾಗಿದ್ದಾರೆ. ಅವರ ಸಾಹಸ ಧೈರ್ಯ ಶೌರ್ಯ ಪರಾಕ್ರಮವನ್ನು ಇಂದಿನ ಪೀಳಿಗೆಗೆ ಅವರ ಆದರ್ಶಗಳು ಮಾದರಿಯಾಗಬೇಕು ಎಂದರು.

ಕುತುಬುದ್ದೀನ ಖಾಜಿ ಮಾತನಾಡಿ ಟಿಪ್ಪು ಸುಲ್ತಾನ ಹಿಂದೂ ದೇವಾಲಯಗಳಿಗೆ ನೀಡಿದ ದೇಣಿಗೆ, ಶರಣಾರ್ಥಿಗಳಿಗೆ ನೀಡಿದ ಆಶ್ರಯ ಹಾಗೂ ಶಕ್ತಿ ಸಮತೋಲನ ತತ್ವವನ್ನು ಪಾಲಿಸಿದ ನ್ಯಾಯಪರ ಆಡಳಿತದ ಮೂಲಕ ಅವರು ಧರ್ಮಾತೀತ ರಾಜರಾದರು ಎಂದರು. ಈ ಸಂದರ್ಭದಲ್ಲಿ ಅಮರ ಪುಣೇಕಾರ, ಸಯ್ಯದ ಇಮಾಮಹುಸೇನ, ನಬಿಸಾಬ ಟಂಕಸಾಲಿ, ರಫೀಕ ಲೋಕಾಪೂರ, ಹಾಜಿಸಾಬ ದಂಡಿನ, ಎ.ಎ. ದಂಡಿಂ–ಯಾ, ರಜಾಕ ಬೇನೂರ, ಅಕ್ಬರ ಮುಲ್ಲಾ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State